## ಅಧ್ಯಾಯ 17

# ಅಬ್ರಹಾಮನ ಸಂಗಡ ದೇವರು ಜನಾಂಗದ ಒಡಂಬಡಿಕೆ ಮಾಡಿಕೊಂಡದ್ದು

17ನೇ ಅಧ್ಯಾಯದಲ್ಲಿ, ದೇವರು ತಾನು ಅಬ್ರಹಾಮ ಮತ್ತು ಆತನ ಕುಟುಂಬದ ಸಂಗಡ ಮಾಡಿಕೊಂಡಿದ್ದ ಒಡಂಬಡಿಕೆಯ ಕುರಿತಾಗಿ ಪುನಃ ಮಾತಾಡಿದನು. ಸುನ್ನತಿಯ ಧಾರ್ಮಿಕ ವಿಧಿಯನ್ನು ಅಬ್ರಹಾಮ ಹಾಗು ಆತನ ಸಂತತಿಯವರ ಸಂಗಡ ದೇವರು ಮಾಡಿಕೊಂಡ ಒಡಂಬಡಿಕೆಗೆ ಒಂದು ಗುರುತಾಗಿ ಕೊಡಲ್ಪಟ್ಟಿತು. ದೇವರ ಯೋಜನೆಯಲ್ಲಿ ಆತನಿಗಿರುವ ಪ್ರಾಮುಖ್ಯವಾದ ಪಾತ್ರವನ್ನು ಪ್ರತಿಫಲಿಸುವಂತೆ ಅಬ್ರಹಾಮನಿಗೆ ಒಂದು ಹೊಸ ಹೆಸರು ಕೊಡಲ್ಪಟ್ಟಿತು (17:5), ಮತ್ತು ಸಾರಳ ಹೆಸರು ಸಹ ಬದಲಾಯಿಸಲ್ಪಟ್ಟಿತು (17:15).

### ಅಬ್ರಾಮನಿಗೆ ಒಂದು ಹೊಸ ಹೆಸರು (17:1-8)

**1ಅಬ್ರಾಮನು ತೊಂಭತ್ತೊಂಭತ್ತು ವರುಷದವನಾದಾಗ ಯೆಹೋವನು ಅವನಿಗೆ
ದರ್ಶನಕೊಟ್ಟು - ನಾನು ಸರ್ವಶಕ್ತನಾದ ದೇವರು; ನನಗೆ ನಡಕೊಂಡು
ದೋಷವಿಲ್ಲದವನಾಗಿರು. 2ನಾನು ನಿನ್ನ ಸಂಗಡ ಒಡಂಬಡಿಕೆ ಮಾಡಿಕೊಳ್ಳುತ್ತೇನೆ;
ಅತ್ಯಧಿಕವಾದ ಸಂತತಿಯನ್ನು ಕೊಡುವೆನು ಅಂದನು. 3ಅಬ್ರಾಮನು ಅಡ್ಡಬೀಳಲು ದೇವರು
ಅವನ ಸಂಗಡ ಮಾತಾಡಿ - 4ನಾನಂತೂ ನಿನಗೆ ವಾಗ್ದಾನಮಾಡುತ್ತೇನೆ; ಏನಂದರೆ ನೀನು
ಅನೇಕ ಜನಾಂಗಗಳಿಗೆ ಮೂಲಪುರುಷನಾಗುವಿ. 5ಇನ್ನು ಮುಂದೆ ನಿನಗೆ ಅಬ್ರಾಮ ಎಂದು
ಹೆಸರಿರುವದಿಲ್ಲ. ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ ನೇಮಿಸಿರುವದರಿಂದ
ನಿನಗೆ ಅಬ್ರಹಾಮನೆಂದು ಹೆಸರಿರುವದು. 6ನಿನಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು;
ನಿನ್ನಿಂದ ಜನಾಂಗಗಳು ಉತ್ಪತ್ತಿಯಾಗಿ ಅರಸರೂ ಹುಟ್ಟುವರು. 7ನಿನಗೂ ನಿನ್ನ ಸಂತತಿಗೂ
ದೇವರಾಗಿರುವೆನೆಂದು ನಾನು ನಿನಗೋಸ್ಕರವೂ ನಿನ್ನ ಸಂತತಿಯ ಎಲ್ಲಾ
ತಲಾಂತರಗಳಿಗೋಸ್ಕರವೂ ಮಾಡಿಕೊಂಡ ನನ್ನ ಒಡಂಬಡಿಕೆಯನ್ನು ಸ್ಥಿರಪಡಿಸುವೆನು.
8ನೀನು ಪ್ರವಾಸವಾಗಿರುವ ಕಾನಾನ್‌ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತ
ಸ್ವಾಸ್ಥ್ಯವನ್ನಾಗಿ ಕೊಟ್ಟು ಅವರಿಗೆ ದೇವರಾಗಿರುವೆನು ಅಂದನು.**

**ವಚನ 1.** 17ನೇ ಅಧ್ಯಾಯದಲ್ಲಿನ ಘಟನೆಗಳು 16ನೇ ಅಧ್ಯಾಯದಲ್ಲಿನ ಘಟನೆಗಳಾಗಿ

ಹದಿಮೂರು ವರ್ಷಗಳಾದ ಮೇಲೆ ಸಂಭವಿಸಿದವು; **ಅಬ್ರಾಮನು ತೊಂಭತ್ತೊಂಭತ್ತು ವರುಷದವನಾದಾಗ ಯೆಹೋವನು ಅವನಿಗೆ** [ಪುನಃ] **ದರ್ಶನಕೊಟ್ಟನು** (ನೋಡಿರಿ 16:16). ಆತನು ತನ್ನನ್ನು **ಸರ್ವಶಕ್ತನಾದ ದೇವರು** (אֵל שַׁדַּי, *ಎಲ್ ಶಡ್ಡಾಯ್*[1]) ಎಂದು ಪರಿಚಯಿಸಿಕೊಂಡನು. ಮೂಲಪಿತೃಗಳು ಆತನನ್ನು ಅರಿತುಕೊಂಡಿದ್ದ ಪ್ರಾಥಮಿಕ ಹೆಸರು *ಎಲ್ ಶಡ್ಡಾಯ್* ಎಂದಾಗಿತ್ತು, ಹೊರತು "ಯೆಹೋವ" (ಕರ್ತನು)[2] ಎಂಬುದಲ್ಲ.

*ಎಲ್ ಶಡ್ಡಾಯ್* ಎಂಬುದರ ವ್ಯುತ್ಪತ್ತಿಶಾಸ್ತ್ರವು ಅಸ್ಪಷ್ಟವಾಗಿರುತ್ತದೆ, ಮತ್ತು ಅದರ ನಿಖರವಾದ ಅರ್ಥವು ಏನೆಂಬುದರ ಬಗ್ಗೆ ಯಾವದೇ ಒಮ್ಮತವು ಇರುವದಿಲ್ಲ. ಒಂದು ದೈವಿಕ ಬಿರುದಾಗಿ, *ಶಡ್ಡಾಯ್* ಎಂಬುದು ಹಳೆಯ ಒಡಂಬಡಿಕೆಯಲ್ಲಿ ಎಂಟು ಸಾರಿ ಬಳಸಲ್ಪಟ್ಟಿದೆ, ಮತ್ತು ಅದು ಏಳು ಸಾರಿ *ಎಲ್* ಎಂಬ ಉಪಸರ್ಗದೊಂದಿಗೆ ಬಳಸಲ್ಪಟ್ಟಿರುತ್ತದೆ (*ಎಲ್ ಶಡ್ಡಾಯ್*; 17:1; 28:3; 35:11; 43:14; 48:3; ವಿಮೋಚನಕಾಂಡ 6:3; ಯೆಹೆಜ್ಕೇಲ 10:5). KJVಯು *ಶಡ್ಡಾಯ್* ಎಂಬುದನ್ನು "ಸರ್ವಶಕ್ತನು" ಎಂದು ಅನುವಾದಿಸುತ್ತದೆ, ಇದು LXXನ ಆಧಾರದಲ್ಲಿ ಆಗಿರುತ್ತದೆ, ಅದರೊಳಗೆ ಈ ಪದವು παντοκράτωρ *(ಪಾಂಡೊಕ್ರಾಟೊರ)* ಎಂದು ಅನುವಾದಿಸಲ್ಪಟ್ಟಿರುತ್ತದೆ, ಇದರರ್ಥವು "ಸಕಲ-ಶಕ್ತಿಭರಿತನು" ಎಂಬುದೆ. ಬಾಬಿಲೋನಿನ ತಾಲ್ಮುಡ್ ತೋರಿಸುವದೇನೆಂದರೆ ರಬ್ಬಿಗಳು ಈ ಪದವನ್ನು "(ತನ್ನಷ್ಟಕ್ಕೆ) ಸಾಕಾಗಿರುವಾತನು"[3] ಎಂಬ ಅರ್ಥವಿರುವಂಥದ್ದೆಂದು ಅರ್ಥೈಸಿಕೊಂಡಿದ್ದರು. ಇನ್ನು ಕೆಲವರು *ಎಲ್ ಶಡ್ಡಾಯ್* ಎಂಬುದರ ಮೂಲ ಅರ್ಥವು "ದೇವರು, ಪರ್ವತದವನು" ಎಂದಾಗಿತ್ತು ಎಂದು ಯೋಚಿಸುತ್ತಾರೆ, ಮತ್ತು ಅದು ಕಾನಾನ್ಯರ ದೇವರುಗಳು ವಾಸಿಸುತ್ತವೆಂದು ನಂಬಲಾದ ಪರ್ವತದೊಂದಿಗೆ ಸಂಬಂಧಗೊಳಿಸುವ ಹೆಸರಾಗಿರುತ್ತಿತ್ತು.[4]

ಈ *ಶಡ್ಡಾಯ್* ಎಂಬುದರ ವ್ಯುತ್ಪತ್ತಿಶಾಸ್ತ್ರದ ಕುರಿತಾದ ನಿರಂತರ ಊಹಾಪೋಹಗಳ ಹೊರತಾಗಿಯೂ, ಈ ಹೆಸರಿನಿಂದ ದೇವರ ಗಾಂಭೀರ್ಯತೆ ಮತ್ತು ಶಕ್ತಿಗಳು ಒತ್ತಿ ಹೇಳಲ್ಪಡುತ್ತವೆಂಬ ಅಭಿಪ್ರಾಯವನ್ನು ಹಲವಾರು ಶಾಸ್ತ್ರಾಧಾರಿತ ಸನ್ನಿವೇಶಗಳು ಸೂಚಿಸುತ್ತವೆ (ವಿಮೋಚನಕಾಂಡ 6:3; ಅರಣ್ಯಕಾಂಡ 24:4, 16; ಯೋಬ 11:7). ಅದರ ಜೊತೆಗೆ, *ಶಡ್ಡಾಯ್* ಎಂಬುದು ಮಕ್ಕಳನ್ನು ಅನುಗ್ರಹಿಸುವ ಮತ್ತು ಆತನ ಚಿತ್ತಕ್ಕೆ ಸಾಮರಸ್ಯವಾಗಿರುವ ಜನಾಂಗಗಳನ್ನು ಎಬ್ಬಿಸುವೆನೆಂಬ ದೇವರ ವಾಗ್ದಾನದೊಂದಿಗೆ ಅನೇಕ ಸಾರಿ ಸಂಬಂಧಗೊಳಿಸಲ್ಪಡುತ್ತದೆ (28:3; 35:11; 43:14; 48:3; 49:25). ಇತಿಹಾಸದ ಮೇಲೆ ಒಡೆಯನಾಗಿರುವ, *ಎಲ್ ಶಡ್ಡಾಯ್* ಬಂಜೆಯರಿಗೆ ಮಕ್ಕಳಾಗುವಂತೆ ಮಾಡಬಲ್ಲನು. ಆತನು ತನ್ನ ಚಿತ್ತಾನುಸಾರವಾಗಿ ಜನಾಂಗಗಳನ್ನು ಎಬ್ಬಿಸಬಲ್ಲನು ಮತ್ತು ಪ್ರಕೃತಿಯನ್ನು ಅಧೀನಪಡಿಸಿಕೊಳ್ಳಬಲ್ಲನು.

ಅಬ್ರಹಾಮನಿಗೆ ತನ್ನನ್ನು "ಸರ್ವಶಕ್ತನಾದ ದೇವರು" ಎಂಬುದಾಗಿ ಪ್ರಕಟಿಸಿಕೊಂಡ ಬಳಿಕ, ಯೆಹೋವನು ಮೂಲಪಿತೃವಿಗೆ ಹೀಗೆ ಆದೇಶಿಸಿದನು, **ನನಗೆ ನಡಕೊಂಡು ದೋಷವಿಲ್ಲದವನಾಗಿರು**. ಆರಂಭದಲ್ಲಿ, ಇದು ಅಬ್ರಹಾಮನನ್ನು ದೇವರು ಒಂದು ಪಾಪರಹಿತ ವಿಧೇಯತೆಯುಳ್ಳ ಪರಿಪೂರ್ಣ ಜೀವಿತವನ್ನು ನಡಿಸುವಂತೆ ದೇವರು ಕರೆಯುತ್ತಿದ್ದಾನೆನೋ ಎಂಬಂತೆ ಕಾಣಿಸಬಹುದು. ಅಂಥ ಜೀವಿತವೊಂದನ್ನು ನಡಿಸುವದು ಅಸಾಧ್ಯವಾಗಿತ್ತಾದ್ದರಿಂದ, ಆ ವಿಧವಾದ ಒಂದು ಪ್ರಬೋಧನೆಯು ಹತಾಶೆ ಮತ್ತು ನಿರಾಶೆಗೆ ನಡಿಸುವದು ನಿಶ್ಚಿತವಾಗಿತ್ತು. ಬದಲಾಗಿ, "ನಡುಕೊಂಡು" ಎಂಬುದರಲ್ಲಿ ದೇವರ ತಾತ್ಪರ್ಯವು ಏನಾಗಿತ್ತೆಂದರೆ ಅಬ್ರಹಾಮನು ತನ್ನ ಜೀವಿತದಲ್ಲಿ ಯೆಹೋವನ ಪ್ರಸನ್ನತೆಯ ಕುರಿತು ಸದಾ ಜಾಗೃತನಾಗಿರಬೇಕು ಎಂಬುದೆ. ತಾನು ನಿರಂತರವಾಗಿ ಆತನ ಸಂಗಡಿಗನಾಗಿರುವನು

ಮತ್ತು ಆತನನ್ನು ಎಂದಿಗೂ ತೊರೆಯುವದಿಲ್ಲ ಮತ್ತು ಕೈ ಬಿಡುವದಿಲ್ಲ ಎಂಬುದನ್ನು ಅಬ್ರಹಾಮನು ತಿಳಿದುಕೊಳ್ಳಬೇಕೆಂಬುದು ದೇವರ ಬಯಕೆಯಾಗಿತ್ತು (ನೋಡಿರಿ ಇಬ್ರಿಯ 13:5, 6). "ದೋಷವಿಲ್ಲದವನಾಗಿರು" (תָּמִים, *ಥಮಿಮ್)* ಎಂದರೆ ಪಾಪರಹಿತ ಪರಿಪೂರ್ಣವಾದ ಜೀವಿತ ಎಂಬ ಅರ್ಥವನ್ನು ಎಂದಿಗೂ ಕೊಡುವದಿಲ್ಲ; ಅದರರ್ಥವು "ದೇವರ ವ್ಯಕ್ತಿತ್ವ ಮತ್ತು ಅಗತ್ಯತೆಗಳ ಕಡೆಗಿರುವ ಸಮರ್ಪಣೆ"[5] ವಿಷಯದಲ್ಲಿ "ಸಂಪೂರ್ಣ" ಅಥವಾ "ಪೂರ್ಣಹೃದಯ" ದಿಂದ ಇರತಕ್ಕದ್ದು ಎಂದಾಗಿರುತ್ತದೆ (6:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಇದು ದಾವೀದನ ಜೀವಿತದಲ್ಲಿ ಸ್ಪಷ್ಟವಾಗಿ ಸಾಭಿತಾಗಿರುತ್ತದೆ, ಆತನು ಹೇಳಿದ್ದೇನೆಂದರೆ ತಾನು ದೇವರ "ವಿಧಿಗಳಿಂದ ತೋಲಗಿಹೋಗಲಿಲ್ಲ," ಆದರೆ ಆತನ ದೃಷ್ಟಿಯಲ್ಲಿ "ನಿರ್ದೋಷಿ" ಯಾಗಿ ನಡೆದುಕೊಂಡೆನು ಎಂಬುದೆ (2 ಸಮುವೇಲ 22:23, 24). ಈ ಮಾತುಗಳ ಅರ್ಥವು ದಾವೀದನು ಎಂದಿಗೂ ಪಾಪವನ್ನೇ ಮಾಡಲಿಲ್ಲ ಎಂದಾಗಿರುವದಿಲ್ಲ, ಯಾಕೆಂದರೆ ಬೈಬಲಿನ ಕಥನಗಳು ಆತನ ಕೆಲವೊಂದು ಅತ್ಯಂಥ ಘೋರ ಅಪರಾಧಗಳ ಬಗ್ಗೆ ತಿಳಿಯಪಡಿಸುತ್ತವೆ (2 ಸಮುವೇಲ 11:1-27; ಕೀರ್ತನೆ 51:1-19). ಹಾಗಿದ್ದರೂ, ದಾವೀದನ ಜೀವಿತದ ಕಥನವು ತೋರಿಸುವದೇನೆಂದರೆ, ಆತನು ಕೆಲವು ಸಾರಿ ಪಾಪವನ್ನು ಮಾಡಿದನಾದರೂ, ಆತನು ಯಾವಾಗಲೂ ದೇವರ ಮನುಷ್ಯನಾಗಿರುವದಕ್ಕೆ ಬಯಸುತ್ತಿದ್ದನು. ದಾವೀದನಿಗಾದರೋ, ಪಾಪವು ಒಂದು ಜೀವನಶೈಲಿಯಾಗಿರಲಿಲ್ಲ; ಅದು ತನ್ನ ಗುಣನಡತೆಗೆ ಅಹಸಜವಾದ ರೀತಿಯಲ್ಲಿ ನಡೆದುಕೊಂಡ ಒಂದು ದಾರಿ ತಪ್ಪುವಿಕೆ ಅದಾಗಿತ್ತು. ಪಾಪವು ದೇವರ ಕಡೆಗೆ ದಾವೀದನು ಹೊಂದಿದ್ದ ಯಥಾರ್ಥವಾದ ಸಮರ್ಪಣೆಗೆ ತದ್ವಿರುದ್ಧವಾಗಿತ್ತು ಮತ್ತು ಪಾಪ ಮಾಡಿದ ಬಳಿಕ ಆತನು ನಿಜವಾಗಿಯೂ ಪಶ್ಚಾತ್ತಾಪ ಪಡುತ್ತಿದ್ದನು ಮತ್ತು ಅದಕ್ಕೆ ಅನುಗುಣವಾಗಿ ದೇವರ ಕ್ಷಮಾಪಣೆಯನ್ನು ಹೊಂದಿಕೊಳ್ಳುತ್ತಿದ್ದನು (2 ಸಮುವೇಲ 12:13; ಕೀರ್ತನೆ 32:1, 2, 5).

ಅಬ್ರಹಾಮನು ಪೂರ್ಣ ಸಮರ್ಪಣೆಯೊಂದಿಗೆ ಆತನ ಸಮ್ಮುಖದಲ್ಲಿ ನಂಬಿಕೆಯಿಂದ ನಡೆದುಕೊಳ್ಳಬೇಕು, ಯೆಹೋವನ ಸೇವೆ ಮಾಡುವವನಾಗಿ ಆತನ ಚಿತ್ತವನ್ನು ನಡಿಸುತ್ತಾ ಇರಬೇಕೆಂದು ದೇವರ ಆದೇಶವಾಗಿತ್ತು. ಅಬ್ರಹಾಮನು ಯಾವಾಗಲೂ ಆ ಆದರ್ಶದಂತೆ ನಡೆದುಕೊಳ್ಳಲಿಲ್ಲ (ನೋಡಿರಿ 12:11-13; 20:1-3); ಆದರೆ ಆತನು ಪಾಪ ಮಾಡಿದಾಗ ಮತ್ತು ದೇವರಿಗೆ ಸಂಪೂರ್ಣ ವಿಧೇಯನಾಗುವದಕ್ಕೆ ವಿಫಲನಾದ ವೇಳೆ, ಆತನು ತನ್ನ ಗುಣನಡತೆಗೆ ಅಸಹಜವಾದ ರೀತಿಯಲ್ಲಿ ತಾತ್ಕಾಲಿಕವಾಗಿ ಮತ್ತು ಯೆಹೋವನ ಕಡೆಗೆ ಹೊಂದಿದ್ದ ಮನಃಪೂರ್ವಕವಾದ ಸಮರ್ಪಣೆಗೆ ತದ್ವಿರುದ್ಧವಾಗಿ ನಡೆದುಕೊಂಡಿದ್ದನು. ಆತನು ದೇವರ ಸಂಗಡ ಹೊಂದಿದ್ದ ಸಮಾಧಾನದ ಸಂಬಂಧವು (ನೀತಿಯು) ನಂಬಿಕೆಯ ಮೂಲಕವಾದ ಕೃಪೆಯ ಮೇಲೆ ಆಧಾರವಾಗಿತ್ತೇ, ಹೊರತು ಆತನ ದೋಷವಿಲ್ಲದಂಥ ಕೃತ್ಯಗಳ ಮೇಲಲ್ಲ. ಅನಂತರದಲ್ಲಿ ದಾವೀದನ ವಿಷಯದಲ್ಲಿ ನಡೆದ ಪ್ರಕಾರವೇ, ದೇವರು ಅರ್ಹತೆಯಿಲ್ಲದೆ ನೀಡಿದ ತನ್ನ ಕಟಾಕ್ಷದ ಮೂಲಕವಾಗಿ ಅಬ್ರಹಾಮನನ್ನು ಕ್ಷಮಿಸಿದನು ಮತ್ತು ಆತನ ಲೆಕ್ಕಕ್ಕೆ ಪಾಪವನ್ನು ಎಣಿಸಲಿಲ್ಲ (ರೋಮಾ 4:1-8).

**ವಚನ 2.** ಅಬ್ರಹಾಮನ ಸಂಗಡ ದೇವರು ತನ್ನ **ಒಡಂಬಡಿಕೆ ಮಾಡಿಕೊಳ್ಳು**ವ ಅಗತ್ಯವು ಏಕೆ ಇತ್ತು ಎಂಬುದು ಸ್ಪಷ್ಟವಾಗಿರುವದಿಲ್ಲ, ಯಾಕೆಂದರೆ ಆತನು ಅದನ್ನು ಈಗಾಗಲೇ 15:18ರಲ್ಲಿ ಮಾಡಿದ್ದನು. ಇಲ್ಲಿ ಬಳಸಲ್ಪಟ್ಟಿರುವ ಪದವು "ಮಾಡಿಕೊಳ್ಳುವೆನು" נָתַן (*ನಾಥಾನ,* "ಕೊಡುವೆನು") ಎಂದಿರುತ್ತದೆ; ಆದರೆ ಈಗಾಗಲೇ ಕನಿಷ್ಠ ಹದಿಮೂರು ವರ್ಷಗಳು ಗತಿಸಿ ಹೋಗಿದ್ದವಾದ್ದರಿಂದ, ಆತನು ಮೂಲ ಒಡಂಬಡಿಕೆಯನ್ನು "ದೃಢೀಕರಿಸುವದಕ್ಕೆ" ಅಥವಾ

"ಬಲಗೊಳಿಸುವದಕ್ಕೆ" ಬಯಸಿದ್ದಿರಬಹುದು. ಹಾಗಿರುವದಾದರೆ, ದೇವರು ಒಡಂಬಡಿಕೆಯನ್ನು ನವೀಕರಿಸುತ್ತಿದ್ದಾನೆ ಮತ್ತು ಆತನು ಅಬ್ರಹಾಮನ ಸಂಗಡ ಮಾಡಿಕೊಂಡಿದ್ದ ಮೂಲ ಒಪ್ಪಂದಕ್ಕೆ ಪೂರಕವನ್ನು ಒದಗಿಸುತ್ತಿದ್ದಾನೆ ಎಂದಾಗುತ್ತದೆ.

ಆರಂಭಿಕ ಒಡಂಬಡಿಕೆಯು ಏಕಪಕ್ಷೀಯವಾಗಿತ್ತು, ಅದರ ನೆರವೇರಿಕೆಯ ಹೊಣೆಯು ದೇವರ ಮೇಲೆ ಮಾತ್ರವೇ ಇತ್ತು. ಅದರಲ್ಲಿ ಅಬ್ರಹಾಮನ ವಿಧೇಯತೆಯನ್ನು ಅಗತ್ಯಗೊಳಿಸುವಂಥ ಯಾವದೇ ವಿಧಿಗಳಿರಲಿಲ್ಲ. ಹೇಗೂ, ಈ ಸನ್ನಿವೇಶದಲ್ಲಿ, ದೇವರು ಒಡಂಬಡಿಕೆಯ ಮೂರು ವಿಭಾಗಗಳನ್ನು ಗುರುತಿಸುತ್ತಾನೆ, ಭಾಗಿಯಾಗಿರುವ ಪ್ರತಿಯೊಂದು ಪಕ್ಷಕ್ಕೂ ಕೆಲವೊಂದು ಹೊಣೆಗಾರಿಕೆಗಳನ್ನು ಕೊಡಲಾಗಿರುತ್ತದೆ. ಆತನು ವಿಭಾಗಗಳಿಗೆ ಮುನ್ನುಡಿಯಾಗಿ "ನಾನಂತೂ [ಯೆಹೋವ] ..." (17:4-8), "ನೀನಂತೂ [ಅಬ್ರಹಾಮ] ..." (17:9-14), ಮತ್ತು "ಸಾರಳನ್ನು ..." (17:15, 16) ಎಂದು ಸೇರಿಸಿದನು. ಆ ಬಳಿಕ, ದೇವರು ಪ್ರತಿಯೊಬ್ಬ ಪಾಲುಗಾರನಿಗೆ ಬೇಕಾದ ನಿಯಮಗಳನ್ನು ಮುಂದಿಡುವದಕ್ಕೆ ಮುಂಚೆ, ಅಬ್ರಹಾಮನಿಗೆ ಸಾಮಾನ್ಯವಾಗಿರುವ ಹೊಣೆಗಾರಿಕೆ ಏನೆಂದರೆ ದೋಷವಿಲ್ಲದೆ ವಿಧೇಯತೆಯಿಂದ ಸಮರ್ಪಕವಾಗಿ ನಡೆದುಕೊಳ್ಳುವುದು ಆಗಿರುತ್ತದೆಂದು ಆತನು ಹೇಳಿದನು. ಯೆಹೋವನು ಒಡಂಬಡಿಕೆಯಲ್ಲಿನ ತನ್ನ ಪಾತ್ರವನ್ನು, ತನ್ನ ದಾರಿಯಲ್ಲಿ ಮತ್ತು ತನ್ನ ವೇಳಾಪಟ್ಟಿಗೆ ಅನುಗುಣವಾಗಿ ನೆರವೇರಿಸುವನು ಎಂಬುದಾಗಿ ಅಬ್ರಹಾಮನು ಆತನನ್ನು ವಿಶ್ವಾಸಿಸಬೇಕಾಗಿತ್ತು. ಸರಳವಾಗಿ ಹೇಳುವದಾದರೆ, ದೇವರಿಗಿಂತ ಮುಂದಕ್ಕೆ ಓಡುವದಾಗಲಿ ಅಥವಾ ಆತನ ಯೋಜನೆಯನ್ನು ನೆರವೇರಿಸುವದರಲ್ಲಿ ಆತನಿಗೆ ಸಹಾಯ ಮಾಡಲು ಪ್ರಯತ್ನಿಸುವದಾಗಲಿ ಇರಕೂಡದಾಗಿತ್ತು.

ಹಿಂದಿನ ಅಧ್ಯಾಯದಲ್ಲಿ, ಸಾರಳು ಇನ್ನು ಮೇಲೆ ಗರ್ಭಧರಿಸುವದಕ್ಕೆ ಸಾಧ್ಯವಿಲ್ಲ ಎಂಬುದರ ಕಾರಣದಿಂದ ಸಂಶಯವು ಇತ್ತೆಂಬುದು ಸ್ಪಷ್ಟವಾಗಿರುತ್ತದೆ. ಈಗ ಅಬ್ರಹಾಮನು ತೊಂಭತ್ತೊಂಭತ್ತು ವರ್ಷದವನು, ಶಕ್ತಿಹೀನನು ಆಗಿದ್ದರಿಂದ ಸಮಸ್ಯೆಯು ಮತ್ತಷ್ಟು ಜಟಿಲಗೊಂಡಿತ್ತು. ಅವರಿಬ್ಬರ ದೇಹಗಳು "ಮೃತಪ್ರಾಯ" ಆಗಿದ್ದವು (ರೋಮಾ 4:19), ಸ್ವಾಭಾವಿಕವಾಗಿ ಸಂತಾನೋತ್ಪತ್ತಿ ಮಾಡುವದಕ್ಕೆ ಸಾಧ್ಯವಿಲ್ಲದಂತಾಗಿದ್ದವು. ಒಟ್ಟಾರೆಯಾಗಿ, ಸಂತತಿಯವರನ್ನು ಪಡೆಯುವದಕ್ಕಾಗಿ ಲಭ್ಯವಿದ್ದ ಯಾವದೇ ಮಾನವ ದಾರಿಗಳನ್ನು ಅವರಿಗೋಸ್ಕರ ದೇವರು ಮುಚ್ಚಿ ಬಿಟ್ಟಿದ್ದನು. ಅವರು "ನಂಬಿಕೆಗೆ ವಶವಾಗುವದಕ್ಕಾಗಿ ... ಮುಚ್ಚಲ್ಪಟ್ಟಿದ್ದರು" (ಗಲಾತ್ಯ 3:23); ಅವರಿಗೆ ದೇವರಲ್ಲಿ ಭರವಸವಿಡುವದೊಂದೇ ಉಳಿದಿರುವ ದಾರಿ ಆಗಿತ್ತು. ಅವರ ಮುಂದೆ ಇದ್ದಂಥ ಈ ಏರಲಾಗದಂಥದ್ದಾಗಿ ಕಾಣಿಸುವಂತಹ ವಿಘ್ನವು ಇರುವಾಗ, ಯೆಹೋವನು ಮತ್ತೊಂದಾವರ್ತಿ **ಅತ್ಯಧಿಕವಾದ ಸಂತತಿಯನ್ನು ಕೊಡುವೆನು** ಎಂಬ ಸಾಮಾನ್ಯವಾದ ವಾಗ್ದಾನವನ್ನು ಮಾಡಿದನು.

**ವಚನ 3.** ದೈವದರ್ಶನವೊಂದನ್ನು ಕಂಡು ಯೆಹೋವನ ವಾಗ್ದಾನವನ್ನು ಕೇಳಿಸಿಕೊಂಡವನಾಗಿ, **ಅಬ್ರಾಮನು ಅಡ್ಡ** ಬಿದ್ದನು. ಇದು ತನಗಿಂತ ಸರ್ವೋನ್ನತನಾದವನ ಎದುರಿನಲ್ಲಿರುವಾಗ ತೋರಿಸುವ ಗೌರವವಾಗಿತ್ತು (37:9, 10; 42:6; 44:14; 48:12; 2 ಸಮುವೇಲ 9:6; 1 ಅರಸು 18:7). ಈ ಪ್ರಕರಣದಲ್ಲಿ, ಸರ್ವೋನ್ನತನು **ದೇವರು** ಆಗಿದ್ದನು, ಶಿರಬಾಗಿಸುವುದು ಅಥವಾ ಅಡ್ಡಬೀಳುವುದು ಯೆಹೋವನ ಸನ್ನಿಧಿಯಲ್ಲಿ ತೋರಿಸುವ ಭಯಭಕ್ತಿ, ಗೌರವ, ಮತ್ತು ಆರಾಧನೆಯ ಒಂದು ವೈಶಿಷ್ಟ್ಯವಾದ ಪ್ರತಿಕ್ರಿಯೆಯಾಗಿತ್ತು (24:52; ವಿಮೋಚನಕಾಂಡ 34:8; ಯಾಜಕಕಾಂಡ 9:24; ಯೆಹೋಶುವ 5:14; ಯೆಹೆಜ್ಕೇಲ 1:28). ಈ ಮಾತಿಗಿಂತಲೂ ಹೆಚ್ಚು ಅರ್ಥಗರ್ಭಿತವಾಗಿದ್ದ ಅಂಗಾಭಿನಯದ ಮೂಲಕ, ಅಬ್ರಹಾಮನು

ದೇವರ ಮಾತುಗಳನ್ನು ಆಲಿಸುವದಕ್ಕೆ ದೀನತೆಯನ್ನು ಮತ್ತು ಮನಸ್ಸಿರುವಿಕೆಯನ್ನು ತೋರ್ಪಡಿಸಿದನು.

**ವಚನ 4.** ಆರಂಭಿಕ ಮಾತುಗಳಿಂದ, ಸಂಭಾಷಣೆಗೆ ಮಟ್ಟವನ್ನು ಸಿದ್ಧಪಡಿಸಲಾಯಿತು. ಈ **ಒಡಂಬಡಿಕೆ**ಯ ಕಡೆಗೆ ದೇವರಿಗಿರುವ ಜವಾಬ್ದಾರಿಗಳು ಯಾವವೆಂದು ಮೊದಲು ಪ್ರಕಟಗೊಳಿಸಲಾಯಿತು: **ನಾನಂತೂ ...** ಈ ಹಿಂದಿನ ದೈವಿಕ ವಾಗ್ದಾನಗಳಿಗೆ ವಿರುದ್ಧವಾಗಿ, ಯೆಹೋವನು ಅಬ್ರಹಾಮನಿಗೆ ಆತನು ಅನೇಕ ಸಂತತಿಯವರನ್ನು ಹೊಂದಿದವನಾಗಿ (15:5)[6] ಒಂದು "ದೊಡ್ಡ ಜನಾಂಗಕ್ಕೆ" ಜನಕನಾಗಿರುತ್ತಾನೆಂದು (12:2) ಭರವಸವನ್ನು ನೀಡಿದ್ದು ಮಾತ್ರವೇ ಅಲ್ಲ, ಆದರೆ ತಾನು ಆತನನ್ನು **ಅನೇಕ ಜನಾಂಗಗಳಿಗೆ ಮೂಲಪುರುಷನಾಗಿ** ಮಾಡುವೆನೆಂದು ಸಹ ಹೇಳಿದನು. ಒಡಂಬಡಿಕೆಗೆ ದೇವರು ಹೊಂದಿರುವ ಸಮರ್ಪಣೆಯನ್ನು ತೋರಿಸಿ ಕೊಡುವದಕ್ಕೆ, ಆದಿಕಾಂಡದ ಲೇಖಕನು ಈ ಚರ್ಚೆಯಾಂಶವನ್ನು ಅಬ್ರಹಾಮನ ವಂಶಾವಳಿಯ ಹಲವಾರು ಕೊಂಬೆಗಳನ್ನು ಪ್ರಸ್ತಾಪಿಸುವ ಮೂಲಕ ಮುಂದಿಡುತ್ತಾನೆ: ಆತನ ಹೆಂಡತಿಯಾದ ಕೆಟೂರಳ ಸಂತತಿಯವರ ಮೂಲಕ (25:1-4), ಆತನ ಮಗನಾದ ಇಸ್ಮಾಯೇಲನ ಮೂಲಕ (25:12-18), ಮತ್ತು ಆತನ ಮೊಮ್ಮಗನಾದ ಏಸಾವನ ಸಂತತಿಯವರ ಮೂಲಕ (36:1-43) ಜನಾಂಗಗಳು ರೂಪಗೊಳ್ಳುವವು.

**ವಚನ 5.** ಈ ವಾಗ್ದಾನದ ಮಹತ್ವವು ಮೂಲಪಿತೃವಿನ ಹೆಸರನ್ನು "ಘನತೆಗೇರಿಸಲ್ಪಟ್ಟ ತಂದೆ" ಎಂಬ ಅರ್ಥವಿದ್ದಂಥ **ಅಬ್ರಾಮ** (אַבְרָם, *ಅಬ್ರಾಮ*) ಎಂಬುದರಿಂದ, **ಅಬ್ರಹಾಮ** ಎಂದು ಬದಲಾಯಿಸಲ್ಪಟ್ಟಿತು. ಈ ಎರಡನೆಯ ಹೆಸರಿನ ನಿಖರವಾದ ವ್ಯುತ್ಪತ್ತಿಶಾಸ್ತ್ರವು ವೇದ ಪಂಡಿತರಿಂದ ವಾಗ್ವಾದಕ್ಕೆ ಒಳಗಾಗಿರುತ್ತದೆಯದರೂ, ದೇವರು "ಅಬ್ರಹಾಮ" (אַבְרָהָם, *ಅಬ್ರಹಾಮ*) ಮತ್ತು אַב-הֲמוֹן *(ಅಬ ಹಾಮೋನ)* ಎಂಬ ಶಬ್ದಾಡಂಬರವನ್ನು ಬಳಸುತ್ತಿದ್ದಾನೆಂದು ತೋರುತ್ತದೆ, ಈ ಎರಡನೆಯ ಪದದ ಅರ್ಥವು **ಸಮೂಹದ ತಂದೆ** ಎಂದಾಗಿರುತ್ತದೆ.[7]

ಪ್ರಾಚೀನ ಮಧ್ಯಪ್ರಾಚ್ಯದ ಸಂಸ್ಕೃತಿಯಲ್ಲಿ, ಇಂದು ನಮಗಿರುವದಕ್ಕಿಂತಲೂ ಅಧಿಕವಾಗಿ ಹೆಸರು ಬದಲಾವಣೆಯು ಎಷ್ಟೋ ಹೆಚ್ಚಾದ ಮಹತ್ವವನ್ನು ಹೊಂದಿರುತ್ತಿತ್ತು. ಇಂದು, ಒಬ್ಬ ವಂಶಾವಳಿಯ ಪೂರ್ವಜನ ಗೌರವಾರ್ಥವಾಗಿ ಅಥವಾ ಒಬ್ಬ ಆಧುನಿಕ ವೀರನ ಗೌರವಾರ್ಥವಾಗಿ, ಅಥವಾ ತಂದೆತಾಯಿಗಳಿಗೆ ಇಷ್ಟವಾಗುವಂತೆ ಅನ್ನಿಸುವ ಕೇವಲ ಒಂದು ಹೆಸರುಪಟ್ಟಿಯಾಗಿ ಒಂದು ಹೆಸರನ್ನಿಡಬಹುದಾಗಿದೆ. ಹಳೆಯ ಒಡಂಬಡಿಕೆಯಲ್ಲಿ, ಹೆಸರುಗಳು ಹೆಚ್ಚು ಪ್ರಾಮುಖ್ಯವಾಗಿದ್ದವು; ಅವುಗಳು ಅನೇಕ ಸಾರಿ ಹೆತ್ತವರು ತಮ್ಮ ಮಗು ಹೇಗಿರುವನು ಎಂಬ ನಿರೀಕ್ಷೆಗಳನ್ನು ವ್ಯಕ್ತಪಡಿಸುತ್ತಿದ್ದವು, ಮತ್ತು ಕೆಲವು ಸಾರಿ ಅವುಗಳ ಆತನ ಅಥವಾ ಅವಳ ಗಮ್ಯತೆಯನ್ನು ಎಂಥದ್ದೆಂದು ಸ್ಪಷ್ಟವಾಗಿ ತಿಳಿಸುತ್ತಿದ್ದವು. ಒಂದು ಹೆಸರು ಬದಲಾವಣೆಯು ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಗುಣಸ್ವಭಾವದಲ್ಲಿ ಅಥವಾ ಜಗತ್ತಿನ ಘಟನೆಗಳಲ್ಲಿರುವ ಆತನ ಭವಿಷ್ಯದ ಪಾತ್ರವನ್ನು ಬದಲಾಯಿಸುವದಕ್ಕೆ ಆಗಿರುತ್ತಿತ್ತು.

**ವಚನ 6.** ಅಬ್ರಹಾಮನ ಪ್ರಕರಣದಲ್ಲಿ, ದೇವರು ಆತನ ಹೆಸರನ್ನು ಬದಲಾಯಿಸಿದ್ದಕ್ಕೆ ಕಾರಣವನ್ನು ನೀಡುತ್ತಾನೆ: ಅತನು ಅವನನ್ನು "ಸಮೂಹದ ತಂದೆ"ಯಾಗಿ **ಅತ್ಯಧಿಕವಾದ ಸಂತಾನವನ್ನು ಕೊಡುವನು**, ಮತ್ತು ಅವನಿಂದ **ಜನಾಂಗಗಳು** ಮತ್ತು **ಅರಸರು ಉತ್ಪತ್ತಿಯಾಗ**ಲಿದ್ದರು.

"ಸಂತಾನ" ಎಂಬ ಪದವು ಅನೇಕ ಸಾರಿ "ಹೆಚ್ಚಿರಿ" ಎಂಬುದರ ಜೊತೆಯಲ್ಲಿ ಬಳಸಲ್ಪಡುತ್ತದೆ (17:2). ಈ ಮಾತುಗಳು ದೇವರು ಪ್ರಥಮ ಪುರುಷ ಮತ್ತು ಸ್ತ್ರೀಗೆ ಹೇಳಿದ

ಮಾತುಗಳನ್ನು ಪ್ರತಿಧ್ವನಿಸುತ್ತವೆ, “ಬಹುಸಂತಾನವುಳ್ಳವರಾಗಿ ಹೆಚ್ಚಿರಿ” (1:28). ಇದು ನೋಹ ಮತ್ತು ಆತನ ಪುತ್ರರಿಗೆ ಪ್ರಳಯದ ಬಳಿಕ ಪುನಃ ಹೇಳಲ್ಪಟ್ಟಿತ್ತು (9:1, 7). ಆದಾಮ ಮತ್ತು ನೋಹನ ಹಾಗೆಯೇ, ಅಬ್ರಹಾಮನು ಲೋಕದ ಇತಿಹಾಸದ ಒಂದು ಹೊಸ ಯುಗದ ಆರಂಭದಲ್ಲಿ ನಿಂತಿದ್ದನು. ಎಲ್ಲಾ ಮಾನವರನ್ನು ಆಶೀರ್ವದಿಸಬೇಕೆಂಬ ದೇವರ ಮೂಲ ಯೋಜನೆಯು ಲೋಕದೊಳಗೆ ಪಾಪದ ಪ್ರವೇಶವಾಗುವದರೊಂದಿಗೆ ಭಂಗಪಡಿಸಲ್ಪಟ್ಟಿತ್ತು. ಪ್ರಳಯದ ಬಳಿಕ, ದುಷ್ಟತ್ವವನ್ನು ಹೊಗಲಾಡಿಸಿ ಶುದ್ಧಗೊಳಿಸಲ್ಪಟ್ಟ ಒಂದು ಲೋಕದಲ್ಲಿ ನೋಹನ ಕುಟುಂಬದ ನೀತಿಯು ಕ್ಷಯಿಸಿತ್ತು. ಅಬ್ರಹಾಮನಿಗೆ “ಅತ್ಯಧಿಕ ಸಂತಾನವನ್ನು ಕೊಡುವೆನು” ಎಂಬುದಾಗಿ ದೇವರು ಮಾಡಿದ ವಾಗ್ದಾನವು ಸಂತಾನವುಳ್ಳವರಾಗುವದಕ್ಕೆ ಆತನು ಸಾಮರ್ಥ್ಯವನ್ನು ಕೊಡುವದನ್ನು ಸೂಚಿಸುತ್ತದೆ - ಹೊರತು ಆತನಿಂದ ಕೇವಲ “ಜನಾಂಗಗಳನ್ನು” ಮತ್ತು “ಅರಸರನ್ನು” ಹುಟ್ಟುವಂತೆ ಮಾಡುವದನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡಲ್ಲ, ಆದರೆ “ಭೂಲೋಕದ ಎಲ್ಲಾ ಕುಟುಂಬಗಳನ್ನು” (12:2, 3) ಆಶೀರ್ವದಿಸಬೇಕೆಂಬ ಆತನ ಮೂಲ ವಾಗ್ದಾನವನ್ನು ನೆರವೇರಿಸುವದರಲ್ಲಿ ಒಂದು ಪಾತ್ರವನ್ನು ನಿರ್ವಹಿಸುವಂತೆ ಆತನನ್ನು ಶಕ್ತಗೊಳಿಸುವದು ಸಹ ಆಗಿತ್ತು.

ಅಬ್ರಹಾಮನಿಂದ “ಅರಸರು” ಹುಟ್ಟುವರು ಎಂಬ ಪ್ರವಾದನೆಯು “ಒಂದು ದೊಡ್ಡ ಜನಾಂಗ” (12:2) ಎಂಬ ವಾಗ್ದಾನದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ, ಆದರೆ ಮೂಲಪಿತೃವಿನಿಂದ ಸ್ವಾಧಿಕಾರದ ಜನಾಂಗಗಳು ಏಳುವವು ಎಂಬುದನ್ನು ಸಹ ಸೂಚಿಸುತ್ತದೆ. ಅಬ್ರಹಾಮನು ಎಂದಿಗೂ ಅರಸನಾಗಲಿಲ್ಲವಾದರೂ, ಆತನು ಅನೇಕ ರಾಜವಂಶಗಳಿಗೆ ಜನಕನಾಗಿದ್ದನು. ಆದಿಕಾಂಡ ಪುಸ್ತಕವು ಈ ವಾಗ್ದಾನವು ಎದೋಮ್ಯರ ಅರಸರು ಮತ್ತು ಪ್ರಮುಖರಲ್ಲಿ ಹಂತ ಹಂತವಾಗಿ ನೆರವೇರುವದನ್ನು ಪ್ರಕಟಗೊಳಿಸುತ್ತದೆ (36:9-43) ಮತ್ತು 49:10ರಲ್ಲಿ ಹೇಳಲ್ಪಟ್ಟಿರುವ ಯೆಹೂದ ಕುಲ “ರಾಜದಂಡ” ಭಾಗವಾಗಿ ಭವಿಷ್ಯದಲ್ಲಿ ಒಬ್ಬ ರಾಜನು (ರಾಜರು) ಬರುವರೆಂಬುದು ಸೂಚ್ಯಾರ್ಥವಾಗಿ ಹೇಳಲ್ಪಟ್ಟಿದೆ.

**ವಚನ 7.** ತರುವಾಯ, ದೇವರು ಅಬ್ರಹಾಮನ ಹಾಗೂ ಆತನ **ಸಂತತಿಯ ಎಲ್ಲಾ ತಲಾಂತರಗಳಿಗೋಸ್ಕರವೂ ಮಾಡಿಕೊಂಡ ಒಡಂಬಡಿಕೆ**ಯನ್ನು ದೃಢೀಪಡಿಸಿದನು. ಒಡಂಬಡಿಕೆಯಲ್ಲಿನ ಒಂದು ಪ್ರಾಮುಖ್ಯವಾದ ವೈಶಿಷ್ಟತೆಯು ಏನೆಂದರೆ ಅವರೊಂದಿಗೆ ಯೆಹೋವನು ಅವರ **ದೇವರಾಗಿ** ಹೊಂದಿರುವ ಆಪ್ತ ಸಂಬಂಧವೇ ಆಗಿತ್ತು. ನೋಹನ ಸಂಗಡ ಮಾಡಿಕೊಂಡ ಒಡಂಬಡಿಕೆಯು “ಸಕಲ ಜೀವರಾಶಿ” ಮತ್ತು “ಎಲ್ಲಾ ಭೂಪ್ರಾಣಿಗಳು” ಹಾಗೂ ಮುಂಬರುವ “ತಲತಲಾಂತರಗಳ” ಸಂಗಡ ಮಾಡಿಕೊಂಡಿದ್ದಾಗಿತ್ತು (9:9-12, 15, 16), ಇದಕ್ಕೆ ತದ್ವಿರುದ್ಧವಾಗಿ ಅಬ್ರಹಾಮನ ಸಂಗಡ ಮಾಡಿಕೊಂಡಿದ್ದ ಒಡಂಬಡಿಕೆಯು ಸಾರಳ ಮೂಲಕ ಹುಟ್ಟುವ **ಸಂತತಿ**ಯವರಿಗೆ ಮಾತ್ರವೇ ಆಗಿತ್ತು. ಆದಿಕಾಂಡದಲ್ಲಿ ಕಥೆಯು ಮುಂದುವರೆದಂತೆ, ವಾಗ್ದಾನವು ಇಸಾಕ ಮತ್ತು ಯಾಕೋಬರ ಮೂಲಕವಾದ ಒಂದೇ ಒಂದು ಕುಟುಂಬದ ಕೊಂಬೆಗೆ ಮಾತ್ರವೇ ಸಂಕುಚಿತಗೊಳ್ಳುತ್ತದೆ. ಏಸಾವನ ಸಂತತಿಯವರು ಅದರಿಂದ ಹೊರಗಿಡಲ್ಪಟ್ಟಿದ್ದರು, ಅವರ ಜೊತೆಯಲ್ಲಿ ಹಾಗರಳು ಹಾಗೂ ಕೆಟೂರಳ ಮೂಲಕವಾಗಿ ಅಬ್ರಹಾಮನಿಗೆ ಹುಟ್ಟಿದ ಮಕ್ಕಳು ಸಹ ಕೈ ಬಿಡಲ್ಪಟ್ಟಿದ್ದರು.

**ವಚನ 8.** ಯೆಹೋವನು ತನ್ನ ನವೀಕರಿಸುವ ಸಂಭಾಷಣೆಯಲ್ಲಿ ಅಬ್ರಹಾಮನಿಗೆ ಆತನು **ಪ್ರವಾಸವಾಗಿರುವ ಕಾನಾನ್‌ದೇಶವನ್ನೆಲ್ಲಾ** ಕೊಡುವೆನು ಎಂಬುದನ್ನು ಸೇರ್ಪಡೆಗೊಳಿಸುತ್ತಾನೆ. ಆ ಬಹುಮಾನವು ಆತನೊಬ್ಬನಿಗೆ ಮಾತ್ರವೇ ಆಗಿರಲಿಲ್ಲ, ಆದರೆ ಆತನ **ಸಂತತಿಗೂ ಶಾಶ್ವತ ಸ್ವಾಸ್ಯವನ್ನಾಗಿ** ಕೊಡಲಾಗಿತ್ತು. ಅಂತಿಮವಾಗಿ, ಯೆಹೋವನು

ಅಬ್ರಹಾಮ ಮತ್ತು ಆತನ ಸಂತತಿಯವರೊಂದಿಗೆ ಒಂದು ವೈಯಕ್ತಿಕ ಸಂಬಂಧವನ್ನು ಹೊಂದಿರುವ ಬಗ್ಗೆ ಪುನಃ ಹೇಳುತ್ತಾನೆ; ಆತನು **ಅವರಿಗೆ ದೇವರಾಗಿರ**ಬೇಕೆಂದು ಬಯಸಿದ್ದನು. ಈ "ಶಾಶ್ವತವಾದ ಒಡಂಬಡಿಕೆ" (17:7) ಮತ್ತು "ಕಾನಾನ್‌ದೇಶ" ವನ್ನು "ಶಾಶ್ವತ ಸ್ವಾಸ್ಥ್ಯ" ವಾಗಿ ಕೊಡುವ ಪ್ರತಿಜ್ಞೆಗಳು ಶರತ್ತರಹಿತವಾದವುಗಳು, ರದ್ದುಗೊಳಿಸಲ್ಪಡದವುಗಳು, ಮತ್ತು ಯೆಹೂದ್ಯರಿಗೆ ನೀಡಲಾಗಿರುವ ನಿತ್ಯವಾದ ವಾಗ್ದಾನಗಳೆಂದು ತಪ್ಪಾಗಿ ಅರ್ಥಮಾಡಿಕೊಳ್ಳಲ್ಪಟ್ಟಿವೆ. ಹೇಗೂ, "ಶಾಶ್ವತ" ಎಂಬುದಕ್ಕಿರುವ ಇಬ್ರಿಯ ಪದವಾದ (עוֹלָם, *ಒಲಾಮ್)* ಎಂಬುದು ಅನೇಕರ ಸಾರಿ ಕೇವಲ ಒಂದು "ಯುಗ" ಎಂಬ ಅರ್ಥವನ್ನು ಕೊಡುತ್ತದೆಂಬುದಾಗಿ ನಾವು ಈಗಾಗಲೇ ಕಲಿತಿದ್ದೇವೆ. ಅಂಥ ಕಾಲಾವಧಿಯು ಮೂರು ದಿನಗಳಷ್ಟು[8] ಕ್ಲುಪ್ತವಾಗಿರಬಲ್ಲದು, ಅಥವಾ ಸನ್ನಿವೇಶಕ್ಕೆ ಅನುಗುಣವಾಗಿ ಅದು ಒಂದು ಜೀವಿತಾವಧಿಯ[9] ವರೆಗೂ ಅಥವಾ ಒಂದು ಅನಿರ್ದಿಷ್ಟಾವಧಿಯ ಕಾಲಾವಧಿ ಆಗಿರಬಲ್ಲದು. ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ಕಲಿಸುದೇನೆಂದರೆ ಶಾರೀರಿಕ ಇಸ್ರಾಯೇಲ್ಯರ ಸಂಗಡ ದೇವರಿಗಿದ್ದ ಸಂಬಂಧವು ಅಂತ್ಯಗೊಂಡಿದೆ ಎಂಬುದೆ. ಇಂದು ದೇವರ ಜನರು "ಧರ್ಮಶಾಸ್ತ್ರಾಧೀನರಲ್ಲ," ಅಂದರೆ ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿಲ್ಲ (ರೋಮಾ 6:14; 7:4, 6). ಕ್ರೈಸ್ತರು ಪ್ರಾಯಶ್ಚಿತ್ತವನ್ನುಂಟು ಮಾಡಿದ ಯೇಸುವಿನ ಮರಣದ ಮೂಲಕವಾಗಿ ಒಂದು ಹೊಸ ಒಡಂಬಡಿಕೆಯಲ್ಲಿ ಭಾಗಿಯಾಗಿರುತ್ತಾರೆ, ಮತ್ತು ಹಳೆಯ ಒಡಂಬಡಿಕೆಯು ನಿಷ್ಕ್ರೀಯವಾಗಿರುತ್ತದೆ (ಇಬ್ರಿಯ 7:22-25; 8:6-13; 9:11-17; 10:9, 10). ಕ್ರೈಸ್ತೀಯ ಯುಗದಲ್ಲಿ, ಜನಾಂಗೀಯ ಭಿನ್ನತೆಗಳು ಮುಖ್ಯವಾಗಿರುವದಿಲ್ಲ. ಸುವಾರ್ತೆಯು ಸಕಲ ಜನಾಂಗಗಳಿಗೋಸ್ಕರ ಇರುತ್ತದೆ (ಮತ್ತಾಯ 28:18-20; ಮಾರ್ಕ 16:15, 16), ಮತ್ತು ನಂಬಿಕೆಯ ಮೂಲಕ ಮತ್ತು ದೀಕ್ಷಾಸ್ನಾನದಿಂದ ಕ್ರಿಸ್ತನಲ್ಲಿ ಸೇರಿಕೊಳ್ಳುವವರು "ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ" ಎಂದು ಎಣಿಸಲ್ಪಟ್ಟಿರುತ್ತಾರೆ (ಗಲಾತ್ಯ 3:26, 27, 29).

## ಒಡಂಬಡಿಕೆಯ ಗುರುತು: ಸುನ್ನತಿ (17:9-14)

**9ಇದಲ್ಲದೆ ದೇವರು ಅಬ್ರಹಾಮನಿಗೆ - ನೀನಂತೂ ನನ್ನ ಒಡಂಬಡಿಕೆಯನ್ನು ಕೈಕೊಂಡು ನಡೆಯಬೇಕು. ನೀನು ಮಾತ್ರವಲ್ಲದೆ ನಿನ್ನ ಸಂತತಿಯವರೂ ಎಲ್ಲಾ ತಲಾಂತರಗಳಲ್ಲಿ ಅದನ್ನು ಕೈಕೊಂಡು ನಡೆಯಬೇಕು. 10ನೀನೂ ನಿನ್ನ ಹಿಂದೆ ಬರುವ ಸಂತತಿಯವರೂ ಕೈಕೊಳ್ಳಬೇಕಾದ ನನ್ನ ನಿಬಂಧನೆಯು ಯಾವದಂದರೆ - ನಿಮ್ಮಲ್ಲಿ ಪ್ರತಿಯೊಬ್ಬ ಗಂಡಸಿಗೂ ಸುನ್ನತಿಯಾಗಬೇಕೆಂಬದೇ. 11ನೀವು ಮಾನಸ್ಥಾನದಲ್ಲಿ ಸುನ್ನತಿ ಮಾಡಿಸಿಕೊಳ್ಳಬೇಕು; ಅದೇ ನಿಮಗೂ ನನಗೂ ಉಂಟಾದ ಒಡಂಬಡಿಕೆಗೆ ಗುರುತು. 12ಎಲ್ಲಾ ತಲಾಂತರಗಳಲ್ಲಿ ನಿಮ್ಮಲ್ಲಿರುವ ಪ್ರತಿಯೊಬ್ಬ ಗಂಡಸೂ, ಮನೆಯಲ್ಲಿ ಹುಟ್ಟಿದವನಾದರೂ ನಿನ್ನ ಸಂತತಿಯಲ್ಲಿ ಹುಟ್ಟದೆ ಅನ್ಯರಿಂದ ಕ್ರಯಕ್ಕೆ ತೆಗೆದುಕೊಂಡವನಾದರೂ ಎಂಟು ದಿನಗಳ ವಯಸ್ಸುಳ್ಳವನಾದಾಗ ಅವನಿಗೆ ಸುನ್ನತಿ ಮಾಡಿಸಬೇಕು. 13ನಿನ್ನ ಮನೆಯಲ್ಲಿ ಹುಟ್ಟಿದವರಿಗೂ ನೀನು ಕ್ರಯಕ್ಕೆ ತೆಗೆದುಕೊಂಡವರಿಗೂ ತಪ್ಪದೆ ಸುನ್ನತಿಯಾಗಬೇಕು. ಹೀಗೆ ನಾನು ಮಾಡುವ ನಿಬಂಧನೆಯ ಗುರುತು ನಿಮ್ಮ ಶರೀರದಲ್ಲೇ ಇದ್ದು ಶಾಶ್ವತವಾದ ಒಡಂಬಡಿಕೆಯನ್ನು ಸೂಚಿಸುವದು. 14ಸುನ್ನತಿ ಮಾಡಿಸಿಕೊಳ್ಳದ ಗಂಡಸು ನನ್ನ ಒಡಂಬಡಿಕೆಯನ್ನು ಮೀರಿದವನಾದ ಕಾರಣ ಅವನು ಕುಲದಿಂದ ತೆಗೆದುಹಾಕಲ್ಪಡಬೇಕು ಎಂದು ಹೇಳಿದನು.**

**ವಚನ 9. ನೀನಂತೂ** ಎಂಬುದು ಒಡಂಬಡಿಕೆಯ ಹೊಣೆಗಾರಿಕೆಗಳ ಎರಡನೆಯ ವಿಭಾಗವನ್ನು ಸೂಚಿಸುತ್ತದೆ (ನೋಡಿರಿ 17:4, 15). 17:1-8ರಲ್ಲಿ, ದೇವರು "ನಾನು ಮಾಡುವೆನು" ಎಂಬ ಮಾತುಗಳ ಒಂದು ಸರಣಿಯನ್ನು ಕೊಟ್ಟಿದ್ದನು; ಆದರೆ ಇಲ್ಲಿ **ಅಬ್ರಹಾಮ**ನು ವಸ್ತುನಿಷ್ಠ ಆಗಿರುವದರ ಬದಲಾಗಿ ಇಲ್ಲಿ ಕ್ರಿಯಾಪದಗಳ ವಸ್ತು ಆಗಿ ಮಾರ್ಪಡುತ್ತಾನೆ. ಯೆಹೋವನು ತನ್ನ ಕೃಪೆ ಮತ್ತು ಪ್ರೀತಿಯ ಒಡಂಬಡಿಕೆಯನ್ನು ಸ್ವತಃ ಮುಂದೆ ಬಂದು ಮಾಡಿಕೊಂಡಿದ್ದನಾದರೂ, ಸರ್ವಶಕ್ತನ ಸಂಗಡದ ಈ ವಿಶೇಷ ಸಂಬಂಧದಲ್ಲಿ ಭಾಗಿಗಳಾಗಿರುವ ಮೂಲಪಿತೃ ಮತ್ತು ಆತನ ಸಂತತಿಯವರ ಕಡೆಯಿಂದ ಆತನು ಒಂದು ವಿಧೇಯತೆಯ ಪ್ರತಿಕ್ರಿಯೆಯನ್ನು ಆತನು ಎದುರುನೋಡಿದನು. ದೇವರು ಅವರಿಗೆ ಸಾಮಾನ್ಯವಾಗಿ ಕೊಟ್ಟ ಆಜ್ಞೆಯು ಕೇವಲ ಆತನ **ಒಡಂಬಡಿಕೆಯನ್ನು ಕೈಕೊಂಡು ನಡೆಯಬೇಕು** ಎಂದಾಗಿತ್ತು; ಆದರೆ ಈ ಆದೇಶದ ತಾತ್ಪರ್ಯವು ಏನಾಗಿತ್ತೆಂಬುದರ ವಿವರಗಳನ್ನು ಆತನು ಇನ್ನೂ ಕೊಡುವುದು ಅಗತ್ಯವಿತ್ತು.

**ವಚನಗಳು 10, 11.** ಯೆಹೋವನು ಪುನರುಚ್ಚರಿಸಿದ್ದೇನೆಂದರೆ **ಒಡಂಬಡಿಕೆ**ಯಲ್ಲಿ ಅಬ್ರಹಾಮ ಮತ್ತು ಆತನ **ಸಂತತಿ** ಸೇರಿತ್ತು ಎಂಬುದೆ. ಒಡಂಬಡಿಕೆಯ ಕೇಂದ್ರಿಯ ಆಜ್ಞೆಯು ಏನಾಗಿತ್ತೆಂದರೆ ಅಬ್ರಹಾಮನ ಮನೆಯವರೊಳಗೆ ಸರ್ವಶಕ್ತನ ಸಂಗಡ ಮಾಡಿಕೊಂಡ **ಒಡಂಬಡಿಕೆಯ ಗುರುತಾಗಿ** ಪ್ರತಿಯೊಬ್ಬ **ಗಂಡಸಿಗೂ ಸುನ್ನತಿಯಾಗಬೇಕು** ಎಂಬುದೆ. ಭವಿಷ್ಯದಲ್ಲಿ ಹುಟ್ಟುವ ಸಂತತಿಯವರೆಲ್ಲಾ ಸುನ್ನತಿಯನ್ನು ಮಾಡಿಸಿಕೊಳ್ಳತಕ್ಕದ್ದಾಗಿತ್ತು ಮತ್ತು ಅವರ ಶರೀರದಲ್ಲಿ ಈ ಗುರುತನ್ನು ಹಾಕಿಸಿಕೊಳ್ಳಬೇಕಿತ್ತು.

ಸುನ್ನತಿಯ ಸಂಸ್ಕಾರದ ಮೂಲವು ಯಾವುದೆಂಬುದು ತಿಳಿದು ಬಂದಿರುವದಿಲ್ಲ, ಆದರೆ ಪುರಾತತ್ವ ಉತ್ಖನನಗಳಿಂದ ಕ್ರಿ.ಪೂ. ಮೂರನೆಯ ಸಹಸ್ರಮಾನದಷ್ಟು ಹಳೆಯದಾದ ಸಿರಿಯನ್ ಸೈನಿಕರು ಸುನ್ನತಿಯಾಗಿರುವ ಚಿತ್ರಣಗಳನ್ನು ಬಯಲಿಗೆ ತಂದಿರುತ್ತವೆ.[10] ಈ ಆಚಾರವು ಇತ್ತೆಂಬುದಕ್ಕೆ ಐಗುಪ್ತದಲ್ಲಿನ ಅತ್ಯಂಥ ಪುರಾತನ ಪುರಾವೆಯು ಕ್ರಿ.ಪೂ ಇಪ್ಪತ್ತೊಂದನೆಯ ಶತಮಾನದ ಸ್ಮಾರಕ ಸ್ತಂಭವೊಂದರಲ್ಲಿ ಕಂಡು ಬಂದಿರುತ್ತದೆ, ಅದು 120 ಪುರುಷರ ಒಂದು ಧಾರ್ಮಿಕ ವಿಧಿಯಾಗಿ ನಡೆದ ಸುನ್ನತಿಯನ್ನು ಬಣ್ಣಿಸುತ್ತದೆ.[11] ಕೆಲವೊಂದು ಕಾನಾನ್ಯ ಮತ್ತು ಅರಬ್ ಗುಂಪುಗಳು ಸಹ ಸುನ್ನತಿಯನ್ನು ಆಚರಿಸುತ್ತಿದ್ದರೆಂದು ಪರಿಚಿತರಾಗಿರುತ್ತವೆ (ಯೆರೆಮೀಯ 9:25, 26), ಆದಾಗ್ಯೂ ಮೆಸಪೋತಾಮ್ಯ (ಅಬ್ರಹಾಮನ ಮೂಲ ನಿವಾಸ) ಮತ್ತು ಫಿಲಿಷ್ಟಿಯರು (ಗ್ರೀಕ್ ದ್ವೀಪಗಳಿಗೆ ಸೇರಿದವರು) ಇದನ್ನು ಆಚರಿಸುತ್ತಿರಲಿಲ್ಲ (ನ್ಯಾಯಸ್ಥಾಪಕ 15:18; 1 ಸಮುವೇಲ 17:26, 36). ಕೆಲವು ಆರಂಭಿಕ ಪುರಾವೆಗಳು ಸೂಚಿಸುವದೇನೆಂದರೆ ಸುನ್ನತಿಯು ದುರಾತ್ಮಗಳನ್ನು ದೂರವಿಡುವದಕ್ಕೆ ಆಚರಿಸಲಾಗುತ್ತಿತ್ತು, ಪ್ರಾಯಕ್ಕೆ ಬರುವ ವಯಸ್ಸಿನಲ್ಲಿ ಪುರುಷಪ್ರಾಯದೊಳಗೆ ಸಾಗುವಾಗ ಒಂದು ಧಾರ್ಮಿಕ ಸಂಸ್ಕಾರವಾಗಿ, ಅಥವಾ ಮದುವೆಗೆ ಒಂದು ಸಿದ್ಧತೆಯಾಗಿ ಆಚರಿಸಲ್ಪಡುತ್ತಿತ್ತು.[12]

ಹೇಗೂ, ಅಬ್ರಹಾಮ ಮತ್ತು ಆತನ ವಂಶದವರಿಗಾದರೋ, ಅದು ಯೆಹೋವನ ಸಂಗಡವಿರುವ ಒಂದು ಆತ್ಮೀಕ ಸಂಬಂಧದ ಗುರುತಾಗಿ ಧಾರ್ಮಿಕ ಮಹತ್ವವನ್ನು ಹೊಂದಿರುವದಾಗಿತ್ತು. ಬೇರೆ ದೇಶಗಳು ಸುನ್ನತಿಯನ್ನು ಆಚರಿಸುತ್ತಿದ್ದವು ಮತ್ತು ಪುರುಷ ಜನನಾಂಗಗಳನ್ನು ಬಟ್ಟೆಗಳು ಮರೆಮಾಡುತ್ತಿದ್ದವಾದ್ದರಿಂದ, ಈ ಗುತುರು ಹೊರಗಿನವರು ಕಂಡುಹಿಡಿಯುವಂಥದ್ದಾಗಿರಲಿಲ್ಲ. ಇದು ವಿಚಿತ್ರವೆಂದು ಅನ್ನಿಸಬಹುದು, ಯಾಕೆಂದರೆ ಈ ಮುಂಚೆ ಆದಿಕಾಂಡದಲ್ಲಿ ದೇವರು ಕೊಟ್ಟಿದ್ದ ಗುರುತುಗಳು ಸಾರ್ವಜನರಿಗೆ

ಕಾಣಿಸುವಂಥವುಗಳಾಗಿದ್ದವು; ಇವುಗಳೊಳಗೆ 1:14ರಲ್ಲಿನ ಆಕಾಶದಲ್ಲಿ ಬೆಳಕು ಕೊಡುವ ನಕ್ಷತ್ರಗಳು, 4:15ರಲ್ಲಿ ಕಾಯಿನನ ಹಣೆಯ ಮೇಲೆ ಗುರುತು ಮತ್ತು 9:8-17ರಲ್ಲಿ ಮುಗಿಲಬಿಲ್ಲು ಸೇರಿರುತ್ತವೆ. ದೇವರು ಸುನ್ನತಿ ಮಾಡಿಸಿಕೊಂಡವನಿಗೆ ದೊರಕುವ ಪ್ರಯೋಜನದ ಒಂದು ವಿಶೇಷ ಗುರುತಾಗಿರಬೇಕೆಂದು ಆಜ್ಞಾಪಿಸಿದನು. ಆತನು ತನ್ನ ದೇಹದ ಬಗ್ಗೆ ಯೋಚಿಸಿಕೊಂಡಾಗ, ತಾನು ದೇವರ ಒಡಂಬಡಿಕೆಯ ಜನರೊಳಗೆ ಒಬ್ಬನೆಂದು ನೆನಪಿಸಿಕೊಳ್ಳುವವನಾಗಿದ್ದನು. ಸುನ್ನತಿಯು ಒಂದು ಜನಾಂಗವಾಗಿ ಅವರು ಯಾರಾಗಿದ್ದಾರೆಂಬುದಕ್ಕೆ ಒಂದು ಗುರುತು ಆಗಿತ್ತು: ಅವರು ಆದುಕೊಳ್ಳಲ್ಪಟ್ಟವರು, ಆಶೀರ್ವದಿಸಲ್ಪಟ್ಟವರು, ಮತ್ತು ಯೆಹೋವನಿಂದ ಒಂದು ದೈವಿಕ ಗಮ್ಯತೆಯನ್ನು ಕೊಡಲ್ಪಟ್ಟವರು.

**ವಚನಗಳು 12, 13.** ಸುನ್ನತಿಯ ಕುರಿತಾದ ಅಪ್ಪಣೆಗಳು ಯಾವವೆಂದರೆ **ಪ್ರತಿಯೊಬ್ಬ ಗಂಡಸೂ ಎಂಟು ದಿನಗಳ ವಯಸ್ಸುಳ್ಳವನಾದಾಗ** ಅದನ್ನು ಮಾಡಿಸಿಕೊಳ್ಳಬೇಕು ಎಂಬುದೆ (ನೋಡಿರಿ 21:4). ಈ ಕಟ್ಟಪ್ಪಣೆಯಲ್ಲಿ ಅಬ್ರಹಾಮನ **ಮನೆಯಲ್ಲಿ ಹುಟ್ಟಿದ** ಎಲ್ಲಾ ಗಂಡು ಕೂಸುಗಳು ಸೇರಿದ್ದರು, ಅವರು ಅವನ ಸಂತತಿಯಲ್ಲಿ ಹುಟ್ಟಿದ್ದರೂ ಸರಿಯೇ ಅಥವಾ ದಾಸರಿಗೆ ಹುಟ್ಟಿದ ಮಕ್ಕಳಾಗಿದ್ದರೂ ಸರಿಯೇ. ಅಬ್ರಹಾಮನ ಸಂತತಿಯವರಲ್ಲೊಬ್ಬನು **ಅನ್ಯರಿಂದ** ಗಂಡಾಳನ್ನು ಕ್ರಯಕ್ಕೆ ಕೊಂಡುಕೊಂಡರೆ, ಆತನು ಆ ದಾಸನಿಗೆ ಕ್ರಯಕ್ಕೆ ತೆಗೆದುಕೊಂಡ ನಂತರ ಆತನು ಮನೆಯವರೊಳಗೆ ಒಬ್ಬನಾಗುವಂತೆ ಅವನಿಗೆ **ಸುನ್ನತಿ** ಮಾಡಿಸಬೇಕು. ಸುನ್ನತಿಯ **ನಿಬಂಧನೆ** ಒಂದು **ಶಾಶ್ವತವಾದ ಒಡಂಬಡಿಕೆ** ಆಗಬೇಕು (17:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 14.** ತಾನು ನೀಡಿದ ಆಜ್ಞೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳುವದಕ್ಕೆ, ಯೆಹೋವನು **ಸುನ್ನತಿ ಮಾಡಿಸಿಕೊಳ್ಳದ ಗಂಡಸು** ಒಂದು ಮನೆಯಲ್ಲಿದ್ದರೆ ಅದನ್ನು **ಒಡಂಬಡಿಕೆಯ** ಗಂಭೀರವಾದ ಉಲ್ಲಂಘನೆ ಎಂಬಂತೆ ನೋಡುವೆನು ಎಂದು ಹೇಳುತ್ತಾನೆ. ಸುನ್ನತಿಯನ್ನು ಮಾಡಿಸಿಕೊಳ್ಳಲು ಆಕ್ಷೇಪವನ್ನು ವ್ಯಕ್ತಪಡಿಸಬಹುದಾಗದ ಪ್ರಾಯಸ್ಥರಾದ ಗಂಡಸರಿಗೆ ಘೋರವಾದ ಪರಿಣಾಮಗಳಾಗುವವೆಂಬ ಎಚ್ಚರಿಕೆಯು ಸೇರಿತ್ತು: **ಅವನು ಕುಲದಿಂದ ತೆಗೆದುಹಾಕಲ್ಪಡಬೇಕು.** "ತೆಗೆದುಹಾಕಲ್ಪಡುವನು" (כָּרַת, *ಕಾರಾಥ್*) ಎಂಬುದರ ಅರ್ಥವು ಕೇವಲ ಆತನು ಸಮುದಾಯದಿಂದ ಪ್ರತ್ಯೇಕಿಸಲ್ಪಡುವನು ಎಂದಷ್ಟೆ ಆಗಿದೆ ಎಂದು ಕೆಲವು ವಿವರಣಾಕಾರರು ವಾದಿಸುತ್ತಾರೆ, ಆದರೆ ಅಂತಹ ಒಂದು ಅಭಿಪ್ರಾಯವು ಮನವೊಲಿಸುವಂತೆ ಕಾಣುವದಿಲ್ಲ. ಒಂದು ಇಬ್ರಿಯ ಮನೆಯೊಳಗೆ ದಾಸನಾಗಿ ಮಾರಲ್ಪಟ್ಟಿದ್ದ ಅನ್ಯರಿಗೆ ಸೇರಿದ ಗಂಡಾಳು ಈಗಾಗಲೇ "ಅವನ ಕುಲದಿಂದ ತೆಗೆದುಹಾಕಲ್ಪಟ್ಟಿರುತ್ತಾನೆ [ಪ್ರತ್ಯೇಕಿಸಲ್ಪಟ್ಟಿರುತ್ತಾನೆ]." ಸಾಮಾನ್ಯವಾಗಿ, "ತೆಗೆದುಹಾಕಲ್ಪಡಬೇಕು" ಎಂದರೆ ಮರಣ ದಂಡನೆ ಎಂದರ್ಥವಾಗಿರುತ್ತದೆ, ಆ ದಂಡನೆಯು ಮನುಷ್ಯನಿಂದಾಗಲಿ ಅಥವಾ ದೇವರಿಂದಾಗಲಿ ಜಾರಿಗೊಳಿಸಲ್ಪಡುತ್ತಿತ್ತು (ಯಾಜಕಕಾಂಡ 18:29; 19:8; 20:3, 5, 6, 17, 18; 1 ಸಮುವೇಲ 28:9; 1 ಅರಸು 11:16). ಈ ಕಡೆಯ ಅಭಿಪ್ರಾಯಕ್ಕೆ ಪುರಾವೆಯನ್ನು *ಕಾರಾಥ* ಎಂಬುದು ಇತರ ಪದಗಳೊಂದಿಗೆ ಜೊತೆಗೂಡಿಸಲ್ಪಟ್ಟಿರುವ ಮತ್ತು ಮರಣದಂಡನೆ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವ ಪದಗುಚ್ಛಗಳಲ್ಲಿ ಕಂಡುಬರುತ್ತದೆ (ವಿಮೋಚನಕಾಂಡ 31:14; ಯಾಜಕಕಾಂಡ 20:2-5; 23:29, 30; ಯೆಹೆಜ್ಕೇಲ 14:8, 9). ಹಾಗಾದರೆ, ಇಬ್ರಿಯ ಮನೆಯವರ ಭಾಗವಾಗುವ ಪ್ರತಿಯೊಬ್ಬ ಗಂಡಸಿಗೂ ಒಡಂಬಡಿಕೆಯ ಗಂಭೀರವಾದ ಸ್ವಭಾವದ ಕುರಿತಾಗಿ ಉಪದೇಶಿಸುವುದು ಅತ್ಯಾವಶ್ಯಕವಾಗಿತ್ತು. ಸುನ್ನತಿಯ ಈ ಜೀವನ್ಮರಣಗಳ ವಿಷಯವು

ಒಬ್ಬನೇ ಸತ್ಯ ದೇವರ ಸಂಗಡವಿರುವ ಸಂಬಂಧವನ್ನು ಗೌರವಿಸುವದರ ಪ್ರಾಮುಖ್ಯತೆಗೆ ಶರೀರದಲ್ಲಿರುವ ಒಂದು ಗುರುತು ಆಗಿರುತ್ತಿತ್ತು.

## ಸಾರಯಳಿಗೆ ಒಂದು ಹೊಸ ಹೆಸರು ಮತ್ತು ಇಸಾಕನ ವಾಗ್ದಾನ (17:15-22)

**[15]ಇದಲ್ಲದೆ ದೇವರು ಅಬ್ರಹಾಮನಿಗೆ - ನೀನು ಇನ್ನು ಮುಂದೆ ನಿನ್ನ ಪತ್ನಿಯನ್ನು ಸಾರಯಳೆಂದು ಕರೆಯದೆ ಸಾರಾ ಎಂದು ಕರೆಯಬೇಕು. [16]ನಾನು ಆಕೆಯನ್ನು ಆಶೀರ್ವದಿಸಿ ಆಕೆಯಲ್ಲಿ ನಿನಗೆ ಮಗನನ್ನು ಕೊಡುವೆನು. ನಾನು ಆಕೆಯನ್ನು ಆಶೀರ್ವದಿಸಿದ್ದರಿಂದ ಆಕೆಯಿಂದ ಅನೇಕ ಜನಾಂಗಗಳೂ ಅರಸರೂ ಉತ್ಪತ್ತಿಯಾಗುವರು ಎಂದು ಹೇಳಲು ಅಬ್ರಹಾಮನು ಅಡ್ಡಬಿದ್ದು ನಕ್ಕು - [17]ನೂರು ವರುಷದವನಿಗೆ ಮಗ ಹುಟ್ಟುವದುಂಟೇ? ತೊಂಭತ್ತು ವರುಷದವಳಾದ ಸಾರಳು ಹೆತ್ತಾಳೇ ಎಂದು ಮನಸ್ಸಿನಲ್ಲಿ ಅಂದುಕೊಂಡು ದೇವರಿಗೆ - [18]ಇಷ್ಮಾಯೇಲನಿದ್ದಾನಲ್ಲಾ, ಅವನೇ ನಿನ್ನ ದಯೆಹೊಂದಿ ಬಾಳಲಿ ಎನ್ನಲು ದೇವರು - [19]ಹಾಗಲ್ಲ, ನಿನ್ನ ಪತ್ನಿಯಾದ ಸಾರಳಲ್ಲಿಯೇ ನಿನ್ನಿಂದ ಮಗನು ಹುಟ್ಟುವನು. ಅವನಿಗೆ ಇಸಾಕನೆಂದು ಹೆಸರಿಡಬೇಕು. ಅವನ ಸಂಗಡ ನನ್ನ ಒಡಂಬಡಿಕೆಯನ್ನು ಸ್ಥಾಪಿಸಿಕೊಳ್ಳುವೆನು; ಅದು ಅವನ ಸಂತತಿಯವರಲ್ಲಿಯೂ ಶಾಶ್ವತವಾಗಿರಬೇಕು. [20]ಇಷ್ಮಾಯೇಲನ ವಿಷಯದಲ್ಲಿ ನೀನು ಮಾಡಿದ ಬಿನ್ನಹವನ್ನು ಕಿವಿಗೊಟ್ಟು ಕೇಳಿದ್ದೇನೆ. ಅವನನ್ನೂ ಆಶೀರ್ವದಿಸಿದ್ದೇನೆ; ಅವನನ್ನು ಅಭಿವೃದ್ಧಿಮಾಡಿ ಅವನಿಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು. ಅವನು ಹನ್ನೆರಡು ಮಂದಿ ಅರಸರನ್ನು ಪಡೆಯುವನು; ಅವನಿಂದ ದೊಡ್ಡ ಜನಾಂಗವಾಗುವಂತೆ ಮಾಡುವೆನು. [21]ಆದರೆ ಆ ನನ್ನ ಒಡಂಬಡಿಕೆಯನ್ನು ಇಸಾಕನ ಸಂಗಡಲೇ ಸ್ಥಾಪಿಸಿಕೊಳ್ಳುತ್ತೇನೆ; ಬರುವ ವರುಷ ಇದೇ ಕಾಲದಲ್ಲಿ ಸಾರಳು ಅವನನ್ನು ಹೆರುವಳು ಅಂದನು. [22]ಆಗ ದೇವರು ಅಬ್ರಹಾಮನ ಸಂಗಡ ಮಾತಾಡುವದನ್ನು ಮುಗಿಸಿ ಅವನ ಬಳಿಯಿಂದ ಮೇಲಕ್ಕೆ ಹೋದನು.**

ಈ ಅಧ್ಯಾಯಕ್ಕೆ ಮುಂಚೆ, ದೇವರು ಅಬ್ರಹಾಮನಿಗೆ ಒಬ್ಬ ಮಗನನ್ನು ಕೊಡುವ ವಾಗ್ದಾನವನ್ನು ಮಾಡಿದ್ದನು; ಆದರೆ ಸಾರಳು ಆತನ ತಾಯಿಯಾಗುವಳೆಂಬ ಯಾವ ಉಲ್ಲೇಖವನ್ನೂ ಮಾಡಿರಲಿಲ್ಲ. ಈ ಕಾರಣದಿಂದಾಗಿಯೇ ಆಕೆಯು ಯೆಹೋವನ ಪ್ರವಾದನೆಯನ್ನು ನೆರವೇರಿಸುವದಕ್ಕೆ ತಾರ್ಕಿಕವಾಗಿ ಇರುವ ದಾರಿಯೆಂದರೆ ಹಾಗರಳ ಮೂಲಕವಾಗಿ ಬದಲಿ ತಾಯಿಯಾಗುವುದೇ ಎಂಬುದಾಗಿ ತನ್ನ ಗಂಡನಿಗೆ ಮನವರಿಕೆ ಮಾಡಲು ಶಕ್ತಳಾಗಿದ್ದಳು. 16ನೇ ಅಧ್ಯಾಯದಲ್ಲಿ ಯೆಹೋವನು ಈ ಕಾರ್ಯತಂತ್ರವನ್ನು ತಳ್ಳಿ ಹಾಕಿದನು, ಮತ್ತು ಇಲ್ಲಿ ಆತನು ವಂಶದ ಕುರಿತು ನೀಡು ಭರವಸಯು ಸ್ಪಷ್ಟವಾಗಿ ಸಾರಳನ್ನು ಒಳಗೊಂಡಿತ್ತು.

**ವಚನಗಳು 15, 16. ನಿನ್ನ ಪತ್ನಿಯ** ವಿಷಯದಲ್ಲಾದರೋ ಎಂಬುದು ಒಡಂಬಡಿಕೆಯ ಮೂರನೆಯ ವಿಭಾಗದ ಆರಂಭವನ್ನು ಸೂಚಿಸುತ್ತದೆ (ನೋಡಿರಿ 17:4, 9). ತಾನು ಸಾರಳನ್ನು **ಆಶೀರ್ವದಿಸಿ ಆಕೆಯಲ್ಲಿ** [ಅಬ್ರಹಾಮನಿಗೆ] **ಮಗನನ್ನು ಕೊಡುವೆನು** ಎಂಬ ಆತನ ದೈವಿಕ ವಾಗ್ದಾನ ಮಾಡುವದರೊಂದಿಗೆ ದೇವರ ಪ್ರಕಟನೆಯು ಒಂದು ಹೊಸ ತಿರುವು ಪಡೆದುಕೊಂಡಿತು. ಮೊದಲನೆಯದಾಗಿ, ಮೂಲಪಿತೃವಿನ ಹೆಂಡತಿಗೆ ಒಂದು ಹೊಸ ಹೆಸರು ಕೊಡಲ್ಪಡುವದೆಂದು ಯೆಹೋವನು ಆತನಿಗೆ ತಿಳಿಸಿದನು. ಆತನು ಆಕೆಯನ್ನು ಇನ್ನು ಮೇಲೆ ಸಾರಯ ಎಂದು ಕರೆಯಬಾರದಿತ್ತು; **ಸಾರಾ** ಎಂದು **ಕರೆಯಬೇಕು**. ಆತನು ಅಬ್ರಹಾಮನ

ಹೆಸರನ್ನು ಬದಲಾಯಿಸಿದ್ದಕ್ಕೆ ಕಾರಣವನ್ನು ವಿವರಿಸಿದ್ದನಾದರೂ, ಆತನ ಹೆಂಡತಿಯ ಹೆಸರನ್ನು ಬದಲಾಯಿಸಿದ್ದಕ್ಕೆ ಯಾವ ಕಾರಣವನ್ನೂ ತಿಳಿಸಲಿಲ್ಲ. ವಾಸ್ತವಿಕದಲ್ಲಿ, "ಸಾರಾ" ಎಂಬುದು "ಸಾರಯ" ಎಂಬುದರ ಪರ್ಯಾಯ ಉಚ್ಚಾರಣೆ ಆಗಿದೆಯಷ್ಟೆ, ಅದರರ್ಥವು "ರಾಣಿ" ಎಂದಾಗಿದೆ. ಹೊಸ ಹೆಸರು ಆಶೀರ್ವಾದಲ್ಲಿ ಪ್ರಸ್ತಾಪಿಸಲಾಗಿರುವ "ಅರಸರು" ಎಂಬುದಕ್ಕೆ ಸರಿಹೊಂದುತ್ತದೆ. ಯೆಹೋವನು ಮಾಡಿದ ಪ್ರತಿಜ್ಞೆಯು ಏನೆಂದರೆ **ಆಕೆಯಿಂದ ಅನೇಕ ಜನಾಂಗಗಳೂ ಅರಸರೂ ಉತ್ಪತ್ತಿಯಾಗುವರು**.

**ವಚನ 17.** ಆ ಮಾತುಗಳನ್ನು ಕೇಳಿಸಿಕೊಂಡಾಗ, **ಅಬ್ರಹಾಮನು** ಯೆಹೋವನ ಮುಂದೆ **ಅಡ್ಡಬಿದ್ದು** ಅಪನಂಬಿಕೆಯಿಂದ **ನಕ್ಕನು** ಯಾಕೆಂದರೆ ಈ ವಾಗ್ದಾನವು ನಡೆಯುವದಕ್ಕೆ ಅಸಾಧ್ಯವೆಂಬಂತೆ ಅನ್ನಿಸಿತ್ತು. ತಾನು ಮತ್ತು ಸಾರಳು ಮಕ್ಕಳನ್ನು ಹಡೆಯುವದಕ್ಕೆ ಸಾಧ್ಯವಾಗುವ ವಯಸ್ಸನ್ನು ಮೀರಿದವರೆಂದು ಗೊತ್ತಿತ್ತು. ಆದ್ದರಿಂದ, ಆತನು ದೇವರನ್ನು **ನೂರು ವರುಷದವನಿಗೆ** ಮಗ ಹುಟ್ಟುವದುಂಟೇ ಅಥವಾ **ತೊಂಭತ್ತು ವರುಷದವಳು** ಮಗನನ್ನು **ಹೆತ್ತಾಳೇ** ಎಂಬುದಾಗಿ ಪ್ರಶ್ನಿಸಿದನು.

**ವಚನ 18.** ದೇವರಿಗೆ ಅಬ್ರಹಾಮನ ಮಾಡಿದ ಮನವಿಯು **ಇಷ್ಮಾಯೇಲನಿದ್ದಾನಲ್ಲಾ, ಅವನೇ ನಿನ್ನ ದಯೆಹೊಂದಿ ಬಾಳಲಿ** ಎಂದಾಗಿತ್ತು. ಆ ಮೂಲಕ ಆತನ ತಾತ್ಪರ್ಯವು ಏನೆಂದರೆ, "ದಯವಿಟ್ಟು, ಯೆಹೋವನೇ, ಇಷ್ಟೊಂದು ವರ್ಷಗಳ ವರೆಗೆ ಕಾದುಕೊಂಡ ಬಳಿಕ, ಈ ಸಮಸ್ಯೆಗಿರುವ ತಾರ್ಕಿಕ ಪರಿಹಾರವನ್ನು ನೀನು ಒಪ್ಪಿಕೊಳ್ಳುವದಿಲ್ಲವೋ ಮತ್ತು ನೀನು ನಿನ್ನ ವಾಗ್ದಾನವನ್ನು ನೆರವೇರಿಸುವ ಆದುಕೊಂಡ ಸಂತಾನವಾಗಿ ನನ್ನ ಮಗನಾದ ಇಸ್ಮಾಯೇಲನಿಗೆ ಅನುಮತಿ ಕೊಡುವದಿಲ್ಲವೋ?"

**ವಚನ 19.** ಅಬ್ರಹಾಮನ ಮನವಿಗೆ ದೇವರ ಪ್ರತಿಕ್ರಿಯೆಯು ಒಂದು ದೃಢವಾದ ಮತ್ತು ಬಲಯುತವಾದ ಗದರಿಕೆ ಆಗಿತ್ತು: **ಹಾಗಲ್ಲ** (אֲבָל, *ಅಬಾಲ*).[13] ಇಸ್ಮಾಯೇಲನು ದೈವಿಕವಾಗಿ ನೇಮಿಸಲ್ಪಟ್ಟ ವಾಗ್ದಾನ ಮಗನಾಗಿ ಪಾತ್ರವನ್ನ ನಿರ್ವಹಿಸಬಹುದೆಂಬ ಮನವಿಯನ್ನು ಆತನು ತಿರಸ್ಕರಿಸಿದನು ಮತ್ತು ಆತನು ಈಗಾಗಲೇ 17:16ರಲ್ಲಿ ಹೇಳಿದ್ದನ್ನು ಪುನಃ ಉಚ್ಚರಿಸಿದನು: **ಸಾರಳಲ್ಲಿಯೇ ಮಗನು** ಹುಟ್ಟುವನು. ಈ ದೃಢೀಕರಿಸುವಿಕೆಯನ್ನು ಮತ್ತಷ್ಟು ಪುಷ್ಠೀಕರಿಸುವದಕ್ಕೆ, ದೇವರು ಅಬ್ರಹಾಮನಿಗೆ ಆ ಹುಡುಗನಿಗೆ **ಇಸಾಕ** (יִצְחָק, *ಯಿಟ್ಸಚಾಕ್*) ಎಂದು ಹೆಸರಿಡಬೇಕೆಂದು ಹೇಳಿದನು, ಇದು 17:17ರಲ್ಲಿ "ನಕ್ಕನು" (וַיִּצְחָק, *ವಯ್ಯಿಟ್ಸಚಾಕ್*) ಎಂಬುದರ ಮೇಲೆ ಶಬ್ದಾಡಂಬರದ ಪ್ರಯೋಗವಾಗಿರುತ್ತದೆ. ವಾಗ್ದಾನ ಮಾಡಲ್ಪಟ್ಟ ಮಗುವು ತಾನು ಹುಟ್ಟುವ ಕುರಿತಾದ ಯೆಹೋವನ ವಾಗ್ದಾನವನ್ನು ನಂಬದೆ ಅವನ ತಂದೆಯು ನಕ್ಕದ್ದನ್ನು ಸ್ಮರಿಸುವದಾಗಿತ್ತು (ನೋಡಿರಿ 18:12; 21:3, 6). ಈ ಮುಂಚೆ, ದೇವರ **ಶಾಶ್ವತವಾದ ಒಡಂಬಡಿಕೆ**ಯ ಪ್ರತಿಜ್ಞೆಯು ಅಬ್ರಹಾನಿಗೆ ಮತ್ತು ಆತನ ಸಂತತಿಯವರಿಗೆ ಮಾಡಿದ್ದಾಗಿತ್ತು (17:7); ಈಗ ಆತನು ಅದನ್ನು ಇಸಾಕ ಮತ್ತು **ಅವನ ಸಂತತಿಯವರಿಗೂ** ವಿಸ್ತರಿಸುತ್ತಿದ್ದಾನೆ.

**ವಚನ 20.** ಆ ಬಳಿಕ ದೇವರು **ಇಸ್ಮಾಯೇಲ**ನ ಕುರಿತಾಗಿ ಅಬ್ರಹಾಮನಿಗಿದ್ದ ಚಿಂತೆಯನ್ನು ಕುರಿತು ಮಾತಾಡುತ್ತಾನೆ, **ನೀನು ಮಾಡಿದ ಬಿನ್ನಹವನ್ನು ಕಿವಿಗೊಟ್ಟು ಕೇಳಿದ್ದೇನೆ.** ಮತ್ತೊಂದಾವರ್ತಿ, "ಇಸ್ಮಾಯೇಲ" ಎಂಬ ಹೆಸರಿನ ಮೇಲೆ ಶಬ್ದಾಡಂಬರವನ್ನು ಬಳಸಲಾಗಿದೆ, ಆ ಹೆಸರಿನ ಅರ್ಥವು "ದೇವರು ಕೇಳುವವನು" (16:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕಳವಳಕ್ಕೊಳಗಾಗಿದ್ದ ತಂದೆಗೆ ಭರವಸವನ್ನು ಕೊಟ್ಟಿದ್ದೇನೆಂದರೆ, ಹಾಗರಳ ಮೂಲಕವಾಗಿ ಹುಟ್ಟಿದ ಆತನ ಮಗನನ್ನು ತಾನು ವಾಗ್ದಾನದ ಬಾಧ್ಯಸ್ಥನೆಂಬುದನ್ನು ತಿರಸ್ಕರಿಸಿದ್ದರೂ, ತಾನು

ಇಸ್ಮಾಯೇಲನನ್ನು ಭವಿಷ್ಯದಲ್ಲಿ ಆಶೀರ್ವಾದಗಳನ್ನು ಹೊಂದುವದರಿಂದ ಅನರ್ಹಗೊಳಿಸುತ್ತಿಲ್ಲ ಎಂಬುದೆ. ಅದಕ್ಕೆ ತದ್ವಿರುದ್ಧವಾಗಿ, ಆತನು ಇಸ್ಮಾಯೇಲನ ಸಂತತಿಯವರನ್ನು **ಆಶೀರ್ವದಿಸಿ ಅತ್ಯಧಿಕಗೊಳಿಸುವೆನೆಂದು** ವಾಗ್ದಾನ ಮಾಡಿದನು. **ಅವನು ಹನ್ನೆರಡು ಮಂದಿ ಅರಸರನ್ನು** (ಹನ್ನೆರಡು ಗೋತ್ರಗಳು ಎಂಬ ಸೂಚ್ಯಾರ್ಥ; ನೋಡಿರಿ 25:12-18) **ಪಡೆಯುವ** ಹಾಗೆ ಮತ್ತು **ಅವನಿಂದ ದೊಡ್ಡ ಜನಾಂಗವಾಗುವಂತೆ** ಮಾಡುವೆನೆಂದು ವಾಗ್ದಾನ ಮಾಡುತ್ತಾನೆ. ಈ ಹೇಳಿಕೆಯು ಈ ಮುಂಚೆ ಯೆಹೋವನು ಇಸ್ಮಾಯೇಲನ ಕುರಿತಾಗಿ ಹಾಗರಳಿಗೆ ಮಾಡಿದ್ದ ವಾಗ್ದಾನದ ಮಹತ್ವಪೂರ್ಣವಾದ ವಿಸ್ತರಣೆ ಆಗಿರುತ್ತದೆ (16:11, 12).

**ವಚನ 21.** ಯೆಹೋವನು ಇಸಾಕನ ಕುರಿತಾಗಿ ಮಾಡಿದ ವಾಗ್ದಾನವು ಆತನು ಹುಟ್ಟುವದಕ್ಕೆ ಮುಂಚೆಯೇ ಮಾಡಲ್ಪಟ್ಟಿತ್ತು, ಇಸ್ಮಾಯೇಲನ ಕುರಿತಾದ ಪ್ರತಿಜ್ಞೆಯಾದರೋ (17:20) ಆತನು ಹುಟ್ಟಿದ ಬಳಿಕ ಮಾಡಲ್ಪಟ್ಟದ್ದಾಗಿತ್ತು. ಅದರ ಜೊತೆಗೆ, ವಿರುದ್ಧಾರ್ಥ ಸೂಚಕ **ಆದರೆ** ಎಂಬುದು ಅಬ್ರಹಾಮನ ಇಬ್ಬರು ಪುತ್ರರ ಮತ್ತು ಅವನವನಿಗೆ ಬರತಕ್ಕ ಆಶೀರ್ವಾದಗಳ ನಡುವಿನ ತದ್ವಿರುದ್ಧತೆಯನ್ನು ಮುಂದಿಡುತ್ತದೆ. 17:21ರ ಆರಂಭದಲ್ಲಿನ, **ನನ್ನ ಒಡಂಬಡಿಕೆ** ಎಂಬುದು **ಇಸಾಕನಿಗೆ** ಮಾಡಿದ ಒಡಂಬಡಿಕೆಯ ವಾಗ್ದಾನಗಳು ಇಸ್ಮಾಯೇಲಿನ ಮಾಡಿದ ವಾಗ್ದಾನಗಳಿಗಿಂತ ಭಿನ್ನವಾದವುಳೆಂದು ತೋರಿಸುತ್ತದೆ. ಯೆಹೋವನು ಈ ವಿವಾದದ ಕುರಿತು ಇನ್ನು ಮುಂದೆ ಯಾವದೇ ಮಾತುಕತೆ ಅಥವಾ ಚರ್ಚೆಗೆ ಅವಕಾಶ ಕೊಡದೆ ಬಾಗಿಲನ್ನು ಮುಚ್ಚಿದನು, **ಬರುವ ವರುಷ ಇದೇ ಕಾಲದಲ್ಲಿ ಸಾರಳು** ಇಸಾಕನಿಗೆ ತಾಯಿಯಾಗುವಳೆಂದು ಹೇಳಿ ತನ್ನ ಇಂಗಿತವನ್ನು ವ್ಯಕ್ತಪಡಿಸಿದನು.

**ವಚನ 22.** ಇದೆಲ್ಲವು ಸ್ಪಷ್ಟವಾಗಿ ತಿಳಿಸಲ್ಪಟ್ಟಾದ ಮೇಲೆ, ಕೂಟವು ಅಂತ್ಯಗೊಂಡಿತ್ತು. **ದೇವರು ಅಬ್ರಹಾಮನ ... ಬಳಿಯಿಂದ ಮೇಲಕ್ಕೆ ಹೋದದದರಿಂದ** ಆ ಬಳಿಕ ಯೆಹೋವನ ಗೋಚರವಾದ ಪ್ರತ್ಯಕ್ಷತೆಯು ಕಾಣೆಯಾಗಿತ್ತು.

## ಒಡಂಬಡಿಕೆಯನ್ನು ಸ್ಥಿರಪಡಿಸಿದ್ದು: ಅಬ್ರಹಾಮನ ಮನೆಯವರ ಸುನ್ನತಿ (17:23-27)

**[23]ಅದೇ ದಿನದಲ್ಲಿ ಅಬ್ರಹಾಮನು ತನ್ನ ಮಗನಾದ ಇಷ್ಮಾಯೇಲನಿಗೂ ತನ್ನ ಮನೆಯಲ್ಲಿದ್ದ ಎಲ್ಲಾ ಗಂಡಸರಿಗೂ, ಅಂದರೆ ಮನೆಯಲ್ಲಿ ಹುಟ್ಟಿದವರಿಗೆ ಮಾತ್ರವಲ್ಲದೆ, ತಾನು ಕ್ರಯಕ್ಕೆ ತೆಗೆದುಕೊಂಡವರಿಗೂ ದೇವರ ಅಪ್ಪಣೆಯಂತೆ ಸುನ್ನತಿಮಾಡಿಸಿದನು. [24]ಅಬ್ರಹಾಮನಿಗೆ ಸುನ್ನತಿಯಾದಾಗ ಅವನಿಗೆ ತೊಂಭತ್ತೊಂಭತ್ತು ವರುಷವಾಗಿತ್ತು. [25]ಇಷ್ಮಾಯೇಲನಿಗೆ ಸುನ್ನತಿಯಾದಾಗ ಅವನಿಗೆ ಹದಿಮೂರು ವರುಷವಾಗಿತ್ತು. [26]ಅಬ್ರಹಾಮನಿಗೂ ಅವನ ಮಗನಾದ ಇಷ್ಮಾಯೇಲನಿಗೂ ಒಂದೇ ದಿನದಲ್ಲಿ ಸುನ್ನತಿಯಾಯಿತು. [27]ಅವನ ಮನೆಯಲ್ಲಿದ್ದ ಗಂಡಸರೆಲ್ಲರಿಗೂ ಅಂದರೆ ಮನೆಯಲ್ಲಿ ಹುಟ್ಟಿದವರಿಗೆ ಮಾತ್ರವಲ್ಲದೆ ಅನ್ಯರಿಂದ ಕ್ರಯಕ್ಕೆ ತೆಗೆದುಕೊಂಡವರಿಗೂ ಅವನೊಂದಿಗೆ ಸುನ್ನತಿಯಾಯಿತು.**

**ವಚನಗಳು 23-25.** ಒಡಂಬಡಿಕೆಯ ಸುನ್ನತಿ ಕುರಿತಾದ ಕಥನದಲ್ಲಿ ಮುಂದಿನ ದೃಶ್ಯವು ದೇವರ ಆಜ್ಞೆಗೆ ಅಬ್ರಹಾಮನು ನೀಡುವ ಪ್ರತಿಕ್ರಿಯೆಗೆ ಸಂಬಂಧಿಸುತ್ತದೆ. ಒಂದು ವರ್ಷದೊಳಗೆ ಸಾರಳ ಮೂಲಕ ಮಗನು ಹುಟ್ಟುವನೆಂಬ ಯೆಹೋವನ ವಾಗ್ದಾನದಿಂದಾಗಿ ಅವನ ನಂಬಿಕೆಯು ಪುನಃ ಚೈತನ್ಯಗೊಂಡಿತ್ತು. ಮಾನವ ದೃಷ್ಟಿಕೋನದಿಂದ ಅಸಾಧ್ಯವಾದ ಘಟನೆಯಂತೆ ಕಂಡದ್ದನ್ನು, ಎದುರುನೋಡುವವನಾಗಿ ಆತನು **ಅದೇ ದಿನದಲ್ಲಿ** ತನ್ನ

ಮನೆಯಲ್ಲಿದ್ದ ಪುರುಷರಿಗೆ ಸುನ್ನತಿ ಮಾಡಿಸುವ ಪ್ರಕ್ರಿಯೆಯನ್ನು ಆರಂಭಿಸಿದ್ದನು (ನೋಡಿರ 17:26). ಅವನಿಗೆ **ತೊಂಭತ್ತೊಂಭತ್ತು** ವರುಷ ಆಗಿದ್ದಾಗ್ಯೂ, **ಅಬ್ರಹಾಮನು** ದೈವಿಕ ಆಜ್ಞೆಯನ್ನು ಸಾಧ್ಯವಾದಷ್ಟು ತ್ವರಿತವಾಗಿ ಜಾರಿಗೆ ತರುವವನಾದನು. ಸುನ್ನತಿಯನ್ನು ಮಾಡಿಸಿಕೊಂಡ ಅಬ್ರಹಾಮನ ಮನೆಯವರೊಳಗೆ ಹಾಗರಳಿಂದ ಹುಟ್ಟಿದ್ದ **ಅವನ ಮಗನಾದ ಇಸ್ಮಾಯೇಲನು** ಸೇರಿದ್ದನು. ಆ ಸಂದರ್ಭದಲ್ಲಿ ಹುಡುಗನಿಗೆ **ಹದಿಮೂರು ವರುಷವಾಗಿತ್ತು**.

**ವಚನಗಳು 26, 27.** ಬೈಬಲಧಾರಿತ ನಂಬಿಕೆಯು, ವಿಧೇಯತೆಗೆ ಸಂಬಂಧವಿಲ್ಲದಂಥ ಕೇವಲ ಒಂದು ಮಾನಸಿಕ ಸಮರ್ಪಣೆ ಎಂಬಂತೆ ಮಾತ್ರವೇ ಕಾಣಲ್ಪಡಬೇಕು ಎಂಬುದು ಎಂದಿಗೂ ದೇವರ ಇಂಗಿತವಾಗಿರಲಿಲ್ಲ. ಯೆಹೋವನು ಆಜ್ಞಾಪಿಸಿದ್ದನ್ನು ತಕ್ಷಣವೇ ಮಾಡಬೇಕಾಗಿತ್ತು, ಮತ್ತು **ಅಬ್ರಹಾಮನು** ವಿಧೇಯನಾದನು. **ಅಬ್ರಹಾಮನಿಗೂ ಅವನ ಮಗನಾದ ಇಷ್ಮಾಯೇಲನಿಗೂ ... ಮನೆಯಲ್ಲಿದ್ದ ಗಂಡಸರೆಲ್ಲರಿಗೂ ... ಒಂದೇ ದಿನದಲ್ಲಿ ಸುನ್ನತಿಯಾಯಿತು**. ಹೇಗೂ, ಮೂಲಪಿತೃವು ಸುನ್ನತಿಗೆ ಅಧೀನಪಡಿಸಿಕೊಂಡಾಗ ಆತನು ತನ್ನ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸುವವನಾಗಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಅಬ್ರಹಾಮನ ನಂಬಿಕೆ ಮತ್ತು ವಿಧೇಯತೆಗಳು ಏರಿಳಿತಗಳನ್ನು ಅನುಭವಿಸುತ್ತಿರುವ ವೇಳೆ, ದೇವರ ಕೃಪೆಯು ಅಬ್ರಹಾಮನ ಕಥೆಯಲ್ಲಿ ಸದಾ-ಇರುವದಾಗಿತ್ತು. ಹಾಗಿದ್ದರೂ, ಯೆಹೋವನ ಸಂಗಡ ರಕ್ಷಣೆಯುಂಟು ಮಾಡುವ ಒಂದು ಸಂಬಂಧಕ್ಕೋಸ್ಕರ “ಸುನ್ನತಿ” ಯ ಸಂಪೂರ್ಣ ಅವಶ್ಯಕತೆಯ ಕುರಿತು ಈಗಾಗಲೇ ವಿವರಿಸಲಾಗಿತ್ತು. ಅಬ್ರಹಾಮನ ಸಂತತಿಯರೊಳಗೆ ಅಥವಾ ಮನೆಯವರೊಳಗೆ ಯಾವನಿಗಾದರೂ ಶರೀರದಲ್ಲಿ ಈ ಗುರುತು ಇಲ್ಲವಾದರೆ ಅಂಥವನು ದೇವರ ಜನರಿಂದ ತೆಗೆದುಹಾಕಲ್ಪಡುವವನಾಗಿದ್ದನು - ಯಾಕೆಂದರೆ ಅಂಥವನು “ನನ್ನ ಒಡಂಬಡಿಕೆಯನ್ನು ಮೀರಿದವನು” ಎಂಬುದಾಗಿ ದೇವರು ಹೇಳಿದನು (17:14).

## ಅನ್ವಯಿಸುವಿಕೆ

### ನಮ್ಮ ನಂಬಿಕೆಯನ್ನು ಹೆಚ್ಚಿಸಿಕೊಳ್ಳುವುದು (ಅಧ್ಯಾಯ 17)

ದೇವರು ಅಬ್ರಹಾಮನ ಸಂಗಡ ಒಂದು ಒಡಂಬಡಿಕೆಯಲ್ಲಿ ಪ್ರತಿಷ್ಠಾಪಿಸಿ ಅದನ್ನು 15ನೇ ಅಧ್ಯಾಯದಲ್ಲಿ ಒಂದು ಶಾಸ್ತ್ರೋಕ್ತವಾದ ಧಾರ್ಮಿಕಾಚರಣೆಯಿಂದ ಮುದ್ರೆ ಹಾಕಿದನು; ಹೇಗೂ, ವಾಗ್ದಾನದ ಮಗುವು ಹುಟ್ಟುವದಕ್ಕೆ ಮುನ್ನ ಕೆಲವೊಂದು ಅಂಗಗಳು ಇನ್ನು ಪೂರ್ಣಗೊಳ್ಳಲಿಕ್ಕೆ ಇದ್ದವು. ಯಜ್ಞಗಳ ಕಾಣಿಕೆಗಳು ಅಬ್ರಹಾಮನಿಗೆ ಮತ್ತು ಆತನ ಸಂತತಿಯವರಿಗೆ ದೇವರ ದೃಢವಾದ ಸಮರ್ಪಣೆಯಾಗಿ ಒಡಂಬಡಿಕೆಯನ್ನು ಸ್ಥಾಪಿಸಿದ್ದವು, ಆದರೆ ಅದು ಬೇರೆ ಯಾರಿಂದಲೂ ಸಾಕ್ಷಿಯಾದಂತಹ ಒಂದು ಖಾಸಗಿ ವ್ಯವಹಾರವಾಗಿತ್ತು. ಅಷ್ಟುಮಾತ್ರವಲ್ಲದೆ, ಅದಕ್ಕೆ ಅಬ್ರಹಾಮನ ಕಡೆಯಿಂದ ಯಾವ ಕ್ರಿಯೆಯೂ ಅಗತ್ಯವಾಗಿರಲಿಲ್ಲ; ಆತನು ಕೇವಲ ಯಜ್ಞಗಳನ್ನು ಏರ್ಪಡಿಸಬೇಕಾಗಿತ್ತು ಮತ್ತು ದೇವರು ಒಂದು ಉರಿಯುವ ದಿವಿಟಿಯ ರೂಪದಲ್ಲಿ ಕಾಣಿಸಿಕೊಂಡು, ಸಾಂಕೇತಿಕವಾಗಿ ಪ್ರಾಣಿಗಳ ಮೃತ ದೇಹಗಳ ನಡುವೆ ಹಾದುಹೋಗಿ ಒಡಂಬಡಿಕೆಯನ್ನು ಆರಂಭಿಸಿ ಖಾತ್ರಿಪಡಿಸುವದನ್ನು ಗಮನಿಸುತ್ತಲಿರಬೇಕಾಗಿತ್ತಷ್ಟೆ. ಮೂಲತಃ, ದೇವರು ತನ್ನ ಒಡಂಬಡಿಕೆಯಲ್ಲಿನ ಪಾಲುದಾರನ ಮೇಲೆ ಯಾವದೇ ಆಜ್ಞೆಗಳನ್ನಾಗಲಿ ಅಥವಾ ನೆರವೇರಿಸುವದಕ್ಕೆ ಯಾವದೇ ಜವಾಬ್ದಾರಿಗಳನ್ನಾಗಲಿ ಹೇರಲಿಲ್ಲ.

ಈಗ ಅಬ್ರಹಾಮನು ಸರ್ವವನ್ನೊಳಗೊಂಡ ಮತ್ತು ಆತನ ಕುಟುಂಬದ ಭವಿಷ್ಯದಲ್ಲಿನ ಸಂತತಿಯವರ ವರೆಗೂ ಮುಂದುವರೆಯುವಂತ ದೈವಿಕ ಆಜ್ಞೆಯೊಂದಕ್ಕೆ ಪ್ರತಿಕ್ರಿಯಿಸುವ

ಸಮಯವು ಬಂದಿತ್ತು. 15ನೇ ಅಧ್ಯಾಯದಲ್ಲಿ ಪ್ರವಾದನೆಯು ಬರೆಯಲ್ಪಟ್ಟದ್ದರ, ಮತ್ತು ಯೆಹೋವನು ಅಬ್ರಹಾಮನ ದೈವಶಾಸ್ತ್ರೀಕ ಜ್ಞಾನವನ್ನು ಹೆಚ್ಚಿಗೆಗೊಳಿಸಿದ್ದರ ನಡುವೆ ಕನಿಷ್ಠ ಹದಿಮೂರು ವರ್ಷಗಳು ಗತಿಸಿದ್ದವು. ಅಬ್ರಹಾಮನು ತನ್ನ ದೈವಿಕ ಸ್ವಭಾವದ ಕುರಿತಾಗಿ ಕೆಲವೊಂದು ತಿಳುವಳಿಕೆಯನ್ನು ಹೊಂದಿರಬೇಕೆಂಬುದು ದೇವರ ಬಯಕೆಯಾಗಿತ್ತು. ದೈವಿಕ ಯೋಜನೆಯಲ್ಲಿ ಮೂಲಪಿತೃವಿಗಿರುವ ಪಾತ್ರದ ಕುರಿತು ಆತನ ತಿಳುವಳಿಕೆಯನ್ನು ಹೆಚ್ಚಿಸುವದಕ್ಕೆ ಸಹ ದೇವರು ಬಯಸಿದ್ದನು. ಈ ನಿಟ್ಟಿನಲ್ಲಿ, ಆತನು ಅಬ್ರಹಾಮ ಮತ್ತು ಬರಲಿರುವ ಆತನ ಸಂತಿಯವರು, ದೈವಿಕ ಕೃಪೆಯಿಂದಾಗಿ ಏನಾಗುವರು, ಮತ್ತು ಅವರು ತಮ್ಮ ಗಮ್ಯತೆಯನ್ನು ನೆರವೇರಿಸುವದಕ್ಕೆ ಏನು ಮಾಡಬೇಕಾದ ಅಗತ್ಯವಿದೆ ಎಂಬುದನ್ನು ವಿವರಿಸಿದನು.

*ನಮಗೆ ಅಗತ್ಯವಾಗಿರುವದನ್ನು ದೇವರು ಕೊಡುವನು* (17:1-8). ದೇವರು ಅಬ್ರಹಾಮನ ಒಡಂಬಡಿಕೆಯನ್ನು ನವೀಕರಿಸಿದನು ಮತ್ತು ವಿಸ್ತರಿಸಿದನು. ಆತನು ಇದನ್ನು ಹಲವಾರು ವಿಧಗಳಲ್ಲಿ ಮಾಡಿದನು.

1. ಯೆಹೋವನು ತನಗೋಸ್ಕರ ಒಂದು ಹೊಸ ಹೆಸರನ್ನು ಪ್ರಕಟಗೊಳಿಸುವ ಮೂಲಕ ತನ್ನ ದೈವಿಕ ಸ್ವಭಾವದ ಕುರಿತಾಗಿ ಅಬ್ರಹಾಮನಿಗೆ ಇನ್ನಷ್ಟು ಹೆಚ್ಚು ಜ್ಞಾನವನ್ನು ಒದಗಿಸಿದನು: *ಎಲ್ ಶಡ್ಡಾಯ್*, "ಸರ್ವಶಕ್ತನಾದ ದೇವರು" ಎಂಬುದು ಅದರರ್ಥ (17:1). ಇಂದು ಬಹಳಷ್ಟು ಜನರು ಹೀಗೆ ಯೋಚಿಸುವದಕ್ಕೆ ಒಲವು ತೋರುತ್ತಾರೆ, "ಒಂದು ಹೆಸರಿನಲ್ಲಿ ಏನಿದೆ? ನಾವು ಒಂದು ಗುಲಾಬಿ ಹೂವನ್ನು ಬೇರೆ ಯಾವದೇ ಹೆಸರಿನಿಂದ ಕರೆದರೂ ಅದು ಸುಮಧುರ ವಾಸನೆಯನ್ನು ಬೀರುತ್ತದಷ್ಟೆ."[14] ಹೇಗೂ, ಬೈಬಲಿನ ಕಾಲದಲ್ಲಿ, ಹೆಸರುಗಳು ಪ್ರಾಮುಖ್ಯವಾಗಿದ್ದವು; ಜನರಿಗೆ ಅವರ ಪೂರ್ವಜರ ಹೆಸರುಗಳ, ಅವರ ಸ್ವಂತ ಹೆಸರುಗಳ, ಅವರ ಮಕ್ಕಳ, ಮತ್ತು ವಿಶೇಷವಾಗಿ ಅವರ ದೇವರುಗಳ ಹೆಸರುಗಳಿಗಿರುವ ಮಹತ್ವಪೂರ್ಣತೆಯು ಗೊತ್ತಿತ್ತು.

ಈ ದೈವದರ್ಶನದ ಹೊತ್ತಿಗೆ, ಅಬ್ರಹಾಮನು ತೊಂಭತ್ತೊಂಭತ್ತು ವರ್ಷದವನಾಗಿದ್ದನು (17:1); ದೇವರು ಆತನಿಗೆ ಊರ್ ಪಟ್ಟಣವನ್ನು ಬಿಟ್ಟು ಕಾನಾನ್ ದೇಶಕ್ಕೆ ಹೋಗುವಂತೆ ಹೇಳಿದಂದಿನಿಂದ ಇದುವರೆಗೂ ಅರವತ್ತು ಅಥವಾ ಎಪ್ಪತ್ತು ವರ್ಷಗಳು ಗತಿಸಿರುವ ಸಾಧ್ಯತೆಯಿತ್ತು. ಯೆಹೋವನು ತನ್ನನ್ನು ಅಬ್ರಹಾಮನಿಗೆ ಏಕ ಸತ್ಯ ದೇವರು ಎಂಬುದಾಗಿ ಪ್ರಕಟಿಸಿಕೊಂಡಿದ್ದನು, ಆತನನ್ನು ಮೆಸಪೊಟಾಮ್ಯದಲ್ಲಿದ್ದ ವಿಗ್ರಹಾರಾಧನೆಯ ಸಂಸ್ಕೃತಿಯೊಳಗಿಂದ ಹೊರಗೆ ಬರುವಂತೆ ಕರೆದಿದ್ದನು. ಕಾಲವು ಗತಿಸಿದ ಹಾಗೆ, ಯೆಹೋವನು ಆತನಿಗೆ ತನ್ನನ್ನು "ಯೆಹೋವ" ಮತ್ತು "ಪರಾತ್ಪರನಾದ ದೇವರು" ಎಂಬುದಾಗಿ ಇನ್ನಷ್ಟು ಪ್ರಕಟಿಸಿಕೊಂಡಿದ್ದನು (14:22).

ಆತನು ಕರೆಯಲ್ಪಟ್ಟ ಗಳಿಗೆಯಿಂದ ಇದುವರೆಗೆ ಅನೇಕ ವರ್ಷಗಳು ಗತಿಸಿದ್ದರಿಂದ ಮತ್ತು ದೇವರ ವಾಗ್ದಾನಗಳಲ್ಲಿನ ಅತ್ಯಂಥ ಪ್ರಾಮುಖ್ಯವಾದ ಭಾಗಗಳು ಇನ್ನೂ ನೆರವೇರದೆ ಉಳಿದಿದ್ದರಿಂದ, ಅಬ್ರಹಾಮನ ನಂಬಿಕೆಯು ಸೊರಗುತ್ತಲಿತ್ತು. ಆಕಾಶದ ನಕ್ಷತ್ರಗಳಷ್ಟು ಅಸಂಖ್ಯಾತರಾದ ಆತನ ಸಂತತಿಯವರು ಎಲ್ಲಿದ್ದರು? ದೇವರು ವಾಗ್ದಾನ ಮಾಡಿದ್ದ ದೊಡ್ಡ ಜನಾಂಗವು ಎಲ್ಲಿತ್ತು? ದೇವರು ಅವನಿಗೆ ಪ್ರಮಾಣ ಮಾಡಿದ್ದ ವಾಗ್ದಾನ ದೇಶದ ಸ್ವಾಮ್ಯವನ್ನು ಪಡೆಯುವನೆಂಬ ಭರವಸವು ಆತನಿಗೆ ಹೇಗೆ ದೊರಕುವದಾಗಿತ್ತು? ಆತನಿಗೆ ಅದರಲ್ಲಿ ಯಾವ ಭಾಗಕ್ಕೂ ಹಕ್ಕುಪತ್ರವು ಸಿಕ್ಕಿರಲಿಲ್ಲ. ಅಲ್ಲದೆ ತಾನು ಭೂಲೋಕದ ಕುಟುಂಬಗಳಿಗೆಲ್ಲಾ ಹೇಗೆ ಆಶೀರ್ವಾದ ಆಗಿರಲು ಸಾಧ್ಯವಿತ್ತೆಂಬುದು ಸಹ ಆತನಿಗೆ ಅರ್ಥವಾಗಲಿಲ್ಲ. ಆದದರಿಂದ,

ಯೆಹೋವನು ತನ್ನನ್ನು *ಎಲ್ ಶಡ್ಡಾಯ್* ಎಂಬುದಾಗಿ ಪ್ರಕಟಿಸಿಕೊಂಡನು, ಸರ್ವಶಕ್ತನಾದವನು, ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸುವದಕ್ಕೆ ಪೂರ್ಣ ಶಕ್ತನಾಗಿ ಪ್ರಕಟಿಸಿಕೊಂಡನು.

ಪ್ರಥಮ ಶತಮಾನದ ಫಿಲಿಷ್ಟಿಯದಲ್ಲಿ, ಯೆಹೂದ್ಯರು ಒಂದು ರೀತಿಯಲ್ಲಿ ಪಿತೃವಾದ ಅಬ್ರಹಾಮನ ಸ್ಥಾನಕ್ಕೆ ಒಂದು ಹೋಲಿಕೆ ತೋರಿಸುವ ಸ್ಥಾನದಲ್ಲಿದ್ದರು. ಅವರು ವಾಗ್ದಾನ ಮಾಡಲ್ಪಟ್ಟಿದ್ದ ಮೆಸ್ಸೀಯನ (ಅಭಿಷಿಕ್ತ ಅರಸನು) ಬರೋಣಕ್ಕಾಗಿ - ಅರವತ್ತು ಅಥವಾ ಎಪ್ಪತ್ತು ವರ್ಷಗಳಲ್ಲ, ಆದರೆ ಶತಮಾನಗಳಿಂದ - ಕಾಯುತ್ತಲಿದ್ದರು. ಆತನು ಬಂದು ರೋಮನ್ನರನ್ನು, ಅವರ ಕೈಗೊಂಬೆಯ ಅರಸರಾಗಿರುವ ಹೆರೋದರ ಸಮೇತವಾಗಿ ಹೊರಗೆ ಓಡಿಸಿ ವಾಗ್ದಾನ ದೇಶದ ಮೇಲೆ ಯೆಹೋವನ ಸಾರ್ವಭೌಮತೆಯನ್ನು ಸ್ಥಾಪಿಸುವನೆಂದು ನಂಬಿದ್ದರು. ಮೆಸ್ಸೀಯನು ತನ್ನ ಜನರ ನ್ಯಾಯವನ್ನು ಸ್ಥಾಪಿಸುವನೆಂದು ಮತ್ತು ಅವರ ಮೇಲೆ, ದಾವೀದನ ಕಾಲದಲ್ಲಿದ್ದ ಪ್ರಕಾರವಾಗಿ ಆಳ್ವಿಕೆ ಮಾಡುವನೆಂದು ನಿರೀಕ್ಷಿಸಲಾಗಿತ್ತು (ಯೆರೆಮೀಯ 23:5, 6; 33:14-16; ಯೆಹೆಜ್ಕೇಲ 34:23-27). ಈ ಪ್ರವಾದನೆಗಳು ಯೆಹೂದಿ ಜನರು ಕಲ್ಪನೆ ಮಾಡಿಕೊಂಡಿದ್ದ ಪ್ರಕಾರವಾಗಿ ಸಾಕಾರಗೊಳ್ಳಲೇ ಇಲ್ಲ. ಕಾಲದಿಂದ ಕಾಲಕ್ಕೆ ವ್ಯಕ್ತಿಗಳು ಎದ್ದೇಳುತ್ತಲೇ ಇದ್ದರು; ಕೆಲವರನ್ನು ವಿಮೋಚಕನಾದ ಮೆಸ್ಸೀಯನು ಎಂಬುದಾಗಿ ಭಾವಿಸಿಕೊಳ್ಳಲಾಗಿತ್ತು; ಆದರೆ ಅವರ ಚಳುವಳಿಗಳು ಅನ್ಯಜನಾಂಗದ ಅರಸರಿಂದ ಸದೆಬಡಿಯಲ್ಪಟ್ಟದ್ದರಿಂದ ಈ ಕನಸುಗಳು ನಿರರ್ಥಕಗೊಂಡಿದ್ದವು (ಮತ್ತಾಯ 24:5, 24-26; ಅಪೊಸ್ತಲರ ಕೃತ್ಯಗಳು 5:35-39; 21:38).

ಇದು “ಯೇಸು” ಎಂಬ ಹೆಸರಿನ ಮಹತ್ವವನ್ನು ಭಾಗಶಃ ವಿವರಿಸುತ್ತದೆ, ಆ ಹೆಸರನ್ನು ಮರಿಯಳ ಮಗನಿಗೆ ಇಡಬೇಕೆಂದು ಯೋಸೇಫನಿಗೆ ಹೇಳಲಾಗಿತ್ತು. ಮತ್ತಾಯನ ಚರಿತ್ರೆಯ ಪ್ರಕಾರವಾಗಿ, ಯೋಸೇಫನು ಮರಿಯಳು ಗರ್ಭಿಣಿಯಾಗಿದ್ದ ಕಾರಣಕ್ಕಾಗಿ ಯಾರಿಗೂ ಗೊತ್ತಾಗದಂತೆ ಅವಳನ್ನು ಬಿಟ್ಟು ಬಿಡುವದಕ್ಕೆ ಯೋಚಿಸುತ್ತಿರುವ ವೇಳೆ, ಆಕೆಯಲ್ಲಿ ಗರ್ಭಧರಿಸಲ್ಪಟ್ಟಿರುವ ಮಗುವು ಪವಿತ್ರಾತ್ಮನಿಂದಾದದ್ದು ಎಂಬುದಾಗಿ ದೇವದೂತನು ಅವನಿಗೆ ತಿಳಿಸಿದನು. ಯೋಸೇಫನು ಮಗುವಿಗೆ “ಯೇಸು” (Ἰησοῦς, *ಯೆಸೊವುಸ)* ಹೆಸರಿಡಬೇಕು ಯಾಕೆಂದರೆ “ಆತನು ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು” ಎಂದು ದೇವದೂತನು ಹೇಳಿದನು (ಮತ್ತಾಯ 1:21). “ಯೇಸು” ಎಂಬುದು “ಯೆಹೋಶುವ” (יְהוֹשֻׁעַ, *ಯೆಹೋಶುವ)* ಎಂಬ ಇಬ್ರಿಯ ಹೆಸರಿನ ಗ್ರೀಕ್ ರೂಪವಾಗಿರುತ್ತದೆ, ಅದರ ಅರ್ಥವು “ಕರ್ತನು [ಯೆಹೋವ] ರಕ್ಷಣೆಯಾಗಿದ್ದಾನೆ.” ಖಂಡಿತವಾಗಿಯೂ, ಯೇಸುವು ಬರಮಾಡಲಿದ್ದ ವಿಮೋಚನೆಯು ರಾಜಕೀಯ ಅಥವಾ ಮಿಲಿಟರಿ ರೂಪದ ವಿಮೋಚನೆಯಾಗಿರಲಿಲ್ಲ, ಆದರೆ ಪಾಪದಿಂದ ಸಿಕ್ಕುವ ಯೆಹೋವನ ರಕ್ಷಣೆಯೇ ಆಗಿತ್ತು.

2. ದೇವರು ಅಬ್ರಹಾಮನಿಗೆ “ನನ್ನ ಮುಂದೆ ನಡೆದುಕೊಂಡು ದೋಷವಿಲ್ಲದವನಾಗಿರು” ಎಂದು ಕರೆ ಕೊಡುವ ಮೂಲಕ ಸಹ ಒಡಂಬಡಿಕೆಯನ್ನು ವಿಸ್ತರಿಸಿದನು (17:1). ಯೆಹೋವನು “ಸರ್ವಶಕ್ತನಾದ ದೇವರು,” ಈಗಲೂ “ಸರ್ವಶಕ್ತನು” ಆಗಿರುತ್ತಾನೆಂಬ ಸತ್ಯವನ್ನಾಧರಿಸಿ, ಆತನು ಪೂರ್ಣ ಹೃದಯದ ಸಮರ್ಪಣೆಯೊಂದಿಗೆ ಮತ್ತು ಸಂಪೂರ್ಣ ಸತ್ಯವಂತಿಕೆಯೊಂದಿಗೆ ಜೀವಿಸಬೇಕಾಗಿತ್ತು. ದೈವಿಕ ವಾಗ್ದಾನಗಳು ನೆರವೇರದ ಇಷ್ಟೊಂದು ಕಾಲವು ಗತಿಸಿದ್ದರಿಂದಾಗಿ ಮೂಲಪಿತೃವು ನಿರಾಶೆಗೊಂಡಿದ್ದನು. ಆತನು ತನ್ನ ಹೃದಯ ಮತ್ತು ಜೀವಿತಗಳನ್ನು ಯೆಹೋವನಿಗೆ ಮರುಸಮರ್ಪಣೆ ಮಾಡಿಕೊಳ್ಳುವ ಹಾಗೆ ಆತನ ನಂಬಿಕೆಯು ನವೀಕರಿಸಲ್ಪಡುವ ಅಗತ್ಯವಿತ್ತು.

3. ವಾಗ್ದಾನದ ಬೆಳಕಿನಲ್ಲಿ, ದೇವರು “ಅಬ್ರಾಮ”ನ ಹೆಸರನ್ನು “ಅಬ್ರಹಾಮ” ಎಂಬುದಾಗಿ ಬದಲಾಯಿಸಿದನು, ಆತನು “ಅನೇಕ ಜನಾಂಗಗಳಿಗೆ ಮೂಲಪುರುಷ”ನಾಗುವನು ಎಂಬುದನ್ನು ಸೂಚಿಸುವದಾಗಿತ್ತು ಮತ್ತು ಆತನಿಂದ “ಅರಸರು ಹುಟ್ಟುವರು” (17:4-6).

4. ಈ ಸಂತತಿಯವರು “ಕಾನಾನ್‌ದೇಶವನ್ನೆಲ್ಲಾ ಶಾಶ್ವತ ಸ್ವಾಸ್ತ್ಯವನ್ನಾಗಿ” ಹೊಂದುವರು ಎಂಬ ವಾಗ್ದಾನವನ್ನು ದೇವರು ಪುನರುಚ್ಚರಿಸುತ್ತಾನೆ (17:7, 8). ಕೆಲವೊಂದು ವಾಗ್ದಾನಗಳನ್ನು ನವೀಕರಿಸುವ ಮೂಲಕ ಮತ್ತು ಇನ್ನು ಕೆಲವೊಂದನ್ನು ಅವುಗಳೊಂದಿಗೆ ಸೇರ್ಪಡೆಗೊಳಿಸುವ ಮೂಲಕ, ದೇವರು ಅಬ್ರಹಾಮನ ನಂಬಿಕೆ ಮತ್ತು ದರ್ಶನದೊಳಗೆ ಆತನು ಮಾನವ ದೃಷ್ಟಿಕೋನದಿಂದ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲದಂಥ ವಿಸ್ತಾರವಾದ ಭವಿಷ್ಯವನ್ನು ಸೇರ್ಪಡೆಗೊಳಿಸಲು ಪ್ರಯತ್ನಿಸುತ್ತಿದ್ದಾನೆ. ಆತನು ಇನ್ನೂ ಈ ದೈವಿಕ ಆಶೀರ್ವಾದಗಳನ್ನು ಅನುಭವಿಸಿರಲಿಲ್ಲ, ಆದರೆ ಅದರರ್ಥವು ದೇವರು ವಿಫಲನಾದನು ಅಥವಾ ಅವುಗಳನ್ನು ಒದಗಿಸುವದಕ್ಕೆ ಅಶಕ್ತನಾದನು ಎಂದಲ್ಲ. ಯೆಹೋವನು ತನ್ನ ವಾಗ್ದಾನಗಳನ್ನು ಯಾವಾಗಲೂ ನೆರವೇರಿಸುವನು ಮತ್ತು “ಸರ್ವಶಕ್ತ ದೇವರಿಗೆ” *(ಎಲ್ ಶಡ್ಡಾಯ್)* ಅಸಾಧ್ಯವಾದದ್ದು ಯಾವದೂ ಇಲ್ಲ ಎಂಬುದನ್ನು ಈ ವೃದ್ಧನಾದ ಭಕ್ತನು ಕಲಿತುಕೊಳ್ಳಬೇಕಾಗಿತ್ತು (ನೋಡಿರಿ 18:10-14). ಅಲ್ಲದೆ ಆತನು ಯೆಹೋವನಲ್ಲಿ ಭರವಸನ್ನು ಇಡುವುದು ಮತ್ತು ಈ ವಾಗ್ದಾನಗಳ ಅಂತಿಮ ನೆರವೇರುವಿಕೆಯ ವಿಷಯದಲ್ಲಿ ತಾಳ್ಮೆಯನ್ನು ಅನುಸರಿಸುವ ಅಗತ್ಯವಿತ್ತು, ಇವುಗಳಲ್ಲಿ ಕೆಲವೊಂದನ್ನು ಆತನು ತನ್ನ ಜೀವಿತಾವಧಿಯಲ್ಲಿ ನೋಡುವದಕ್ಕೆ ಶಕ್ತನಾಗುತ್ತಿರಲಿಲ್ಲ.

ಆದಿ ಕ್ರೈಸ್ತರು - ಮತ್ತು ಆ ಕಾಲದಿಂದ ಇಂದಿನ ವರೆಗೂ ಪ್ರತಿಯೊಂದು ತಲೆಮಾರು - ಅಬ್ರಹಾಮನು ಇದ್ದಂಥ ಅದೇ ರೀತಿಯ ಪರಿಸ್ಥಿತಿಯಲ್ಲಿ ಇದ್ದಿರುತ್ತದೆ. ದೇವರು ಮೂಲಪಿತೃವನ್ನು ರಕ್ಷಣೆ ಮಾಡಿದ್ದನು (15:6; ರೋಮಾ 4:1-5) ಮತ್ತು ಆತನನ್ನು ಸಮೃದ್ಧಿಯಾಗಿ ಆಶೀರ್ವದಿಸಿದ್ದನು. ಈ ಆಶೀರ್ವಾದಗಳು ಇಸಾಕನು ಹುಟ್ಟುವದಕ್ಕೆ ಮತ್ತು ಇತರ ದೈವಿಕ ವಾಗ್ದಾನಗಳು ನೆರವೇರುವದಕ್ಕೆ ಬಹಳ ಕಾಲದ ಹಿಂದೆಯೇ ಆತನಿಗೆ ದೊರಕಿದ್ದವು. ಅದೇ ರೀತಿಯಲ್ಲಿಯೇ, ಕ್ರಿಸ್ತನಲ್ಲಿರುವವರಾದ ನಾವು ಅಬ್ರಹಾಮನ ಆತ್ಮೀಕ ಸಂತತಿಯವರಾಗಿ ಆತನಿಂದ ಹೇರಳವಾಗಿ ಆಶೀರ್ವದಿಸಲ್ಪಟ್ಟಿದ್ದೇವೆ (ಗಲಾತ್ಯ 3:26-29; ಎಫೆಸ 1:3). ಕರ್ತನ ಮೂಲಕವಾಗಿ, “ಪ್ರಥಮ ಫಲವಾಗಿರುವ ಪವಿತ್ರಾತ್ಮವರವನ್ನು” ಹೊಂದಿದ್ದೇವೆ; ಆದಾಗ್ಯೂ ಬಿದ್ದು ಹೋಗಿರುವ ಒಂದು ಲೋಕದಲ್ಲಿರುವವರಾಗಿ, ನಾವು “ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ” (ರೋಮಾ 8:23).

ಯೇಸುವು “ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು” (2 ತಿಮೊಥೆ 1:10). ಆತನಲ್ಲಿ, ನಿತ್ಯಜೀವದ ಮುನ್‌ರುಚಿಯನ್ನು ಈಗ ಅನುಭವಿಸಿದ್ದೇವೆ (ಯೋಹಾನ 3:36; 5:24; ಇಬ್ರಿಯ 6:4, 5), ಹೀಗಿದ್ದರೂ ವಾಗ್ದಾನಗಳ ನೆರವೇರಿಕೆಯು ಭವಿಷ್ಯದೊಳಗೆ ಇನ್ನು ಬಹಳಷ್ಟು ಕಾಲದ ನಂತರ ಸಂಭವಿಸಲಿದೆ. ನಾವು ಈಗಾಗಲೇ ರಕ್ಷಿಸಲ್ಪಟ್ಟಿದ್ದೇವೆ (1 ಕೊರಿಂಥ 15:1, 2), ಆದರೆ ಕ್ರಿಸ್ತನು ಹಿಂದಿರುಗಿ ಬರುವ ತನಕ ನಾವು ರಕ್ಷಣೆಯನ್ನು ಸಂಪೂರ್ಣವಾಗಿ ಆನಂದಿಸುವದಿಲ್ಲ (ರೋಮಾ 13:11). ಆ ಕಾಲದಲ್ಲಿ, ಆತನು ನಮ್ಮನ್ನು ತನ್ನ ಬಳಿಯಲ್ಲಿ ಕೂಡಿಸಿಕೊಳ್ಳುವನು ಮತ್ತು ನಮ್ಮನ್ನು ಒಂದು ಉತ್ತಮವಾದ ರಾಜ್ಯಕ್ಕೆ ಕರೆದೊಯ್ಯುವನು (ಯೋಹಾನ 5:28, 29; 1 ಕೊರಿಂಥ 15:22-26, 52-58; 1 ಥೆಸಲೋನಿಕ 4:13-18). ದೈವಶಾಸ್ತ್ರೀಕವಾಗಿ, ದೈವಿಕ ಆಶೀರ್ವಾದದ

ಅನುಭವವನ್ನು "ಈಗಾಗಲೇ ಇರುವಂಥದ್ದು ಮತ್ತು ಇನ್ನೂ ಇಲ್ಲ" ಎಂದು ಕರೆಯಬಹುದು. ಅಬ್ರಹಾಮನ ಹಾಗೆ, ನಾವು ಕರ್ತನ ಮುಂದೆ ನಂಬಿಕೆಯಿಂದ "ನಡೆದುಕೊಳ್ಳಬೇಕು" ಮತ್ತು "ದೋಷವಿಲ್ಲದವರಾಗಿರಬೇಕು" (17:1), ದೇವರ ವಾಗ್ದಾನಗಳೆಲ್ಲವೂ ನಮ್ಮ ಶಾರೀರಿಕ ಜೀವಿತಾವಧಿಯೊಳಗೆ ನೆರವೇರಿದರೂ ಸರಿಯೇ ಅಥವಾ ನೆರವೇರದಿದ್ದರೂ ಸರಿಯೇ.

*ದೇವರು ನಮ್ಮನ್ನು ಪ್ರತ್ಯೇಕಗೊಳಿಸಿದನು* (17:9-14). ದೇವರು ಸುನ್ನತಿಯನ್ನು ಒಡಂಬಡಿಕೆಯ ಒಂದು ಗುರುತಾಗಿ ನೀಡಿದನು. ಇದು ಜನನೇಂದ್ರಿಯ ಮೇಲೆ ಮಾಡಲಾಗುವ ಒಂದು ಭಿನ್ನತೆಯನ್ನು ತಿಳಿಸುವ ಗುರುತು ಆಗಿತ್ತು ಯಾಕೆಂದರೆ ಒಡಂಬಡಿಕೆಯು ಅಬ್ರಹಾಮನನ್ನು ಮತ್ತು ಆತನ ಸಂತತಿಯವರನ್ನು ದೇವರಿಗೋಸ್ಕರ ಪ್ರತ್ಯೇಕಗೊಳಿಸಿತ್ತು. ಮೂಲಪಿತೃವಿನ ಕುಟುಂಬದಲ್ಲಿರುವ ಪ್ರತಿಯೊಬ್ಬ ಪುರುಷ ಸದಸ್ಯನ ಜನನಾಂಗದ ಮುಂದೋಗಲನ್ನು ಕತ್ತರಿಸಬೇಕಾಗಿತ್ತು, ಆ ವ್ಯಕ್ತಿಯ ವಯಸ್ಸು ಎಷ್ಟೇ ಇದ್ದರೂ ಇದನ್ನು ಮಾಡಬೇಕಾಗಿತ್ತು. ಗಂಡು ಕೂಸುಗಳಿಗಾದರೋ, ಈ ಕಾರ್ಯವಿಧಾನವನ್ನು ಅದು ಹುಟ್ಟಿದ ಎಂಟನೆಯ ದಿನದಲ್ಲಿ ಮಾಡಬೇಕಾಗಿತ್ತು (17:9-12). ಅಬ್ರಹಾಮನ ಮನೆಯಲ್ಲಿದ್ದ ಸೇವಕರೆಲ್ಲರಿಗೆ ಸಹ, ಅವರು ಸ್ವತಂತ್ರರಾಗಿ ಹುಟ್ಟಿದರೂ ಸರಿಯೇ ಅಥವಾ ದಾಸರಾಗಿದ್ದರೂ ಸರಿಯೇ ಅವರಿಗೆ ಸುನ್ನತಿ ಮಾಡಬೇಕಿತ್ತು (17:12, 13). ಒಡಂಬಡಿಕೆಯ ಈ ಗುರುತು ಅಬ್ರಹಾಮನ ದೇವರಲ್ಲಿ ನಂಬಿಕೆ ಮತ್ತು ಭಕ್ತಿಯಲ್ಲಿ ಪಾಲುಗಾರರಾಗಿದ್ದ ಮತ್ತು ಆತನ ನಿಕಟ ಹಾಗೂ ವಿಶಾಲವಾದ ಕುಟುಂಬಕ್ಕೆ ವಾಗ್ದಾನ ಮಾಡಿದ್ದ ಆಶೀರ್ವಾದಗಳಲ್ಲಿ ಭಾಗಿಯಾದ್ದ ಎಲ್ಲರಿಗೂ ಅನ್ವಯವಾಗುವದಾಗಿತ್ತು.

ಅದರ ಜೊತೆಗೆ, ಈ ಧಾರ್ಮಿಕ ಸಂಸ್ಕಾರವು ಯೆಹೋವನ ಜನರಿಗೆ ಒಂದು ಗುರುತಿನ ಅರ್ಥವನ್ನು ಹೊಂದಿದ್ದು, ಹೃದಯದಲ್ಲಾದ ಸುನ್ನತಿಯನ್ನು ಸೂಚಿಸುವದಾಗಿತ್ತು (ಧರ್ಮೋಪದೇಶಕಾಂಡ 10:16; 30:6; ಯೆರೆಮೀಯ 4:4). ದೇವರಿಗೆ ಭಕ್ತಿಯಿಂದಿರುವದೆಂದರೆ ಅಶುದ್ಧತೆ, ಅನೈತಿಕೆ, ಮತ್ತು ಅನ್ಯಧರ್ಮಿಯತೆ ಇವುಗಳಿಂದ ಸಂಬಂಧವನ್ನು ಕತ್ತರಿಸಿಕೊಳ್ಳುವದಾಗಿತ್ತು. ಈ ವಿಷಯದಲ್ಲಿ ಬಂಡಾಯಕರವಾದ ಅವಿಧೇಯತೆಯನ್ನು ತೋರಿಸಿದರೆ ಅದನ್ನು ಸಹಿಸಬಾರದಿತ್ತು; ಈ ಒಡಂಬಡಿಕೆಯ ಗುರುತಿನ ಮಹತ್ವಕ್ಕೆ ಕಿವಿಗೊಡದಿರುವವರು ದೇವರ ಜನರೊಳಗಿಂದ ತೆಗೆದು ಹಾಕಲ್ಪಡಬೇಕಿತ್ತು (17:14).

ದೇವರು ಸುನ್ನತಿಯನ್ನು ಒಂದು ಗುರುತಾಗಿ ಪ್ರತಿಷ್ಠಾಪಿಸುವದಕ್ಕೆ ಮುನ್ನವೇ ಪ್ರಾಚೀನ ಜಗತ್ತಿನಲ್ಲಿ ಇತರ ಜನಾಂಗೀಯ ಗುಂಪುಗಳು ಇದನ್ನು ಆಚರಣೆ ಮಾಡುತ್ತಿದ್ದವೆಂಬ ವಾಸ್ತವಾಂಶವು ಅಬ್ರಹಾಮನ ಕುಟುಂಬಕ್ಕೆ ಅದು ಹೊಂದಿದ್ದ ಮಹತ್ವವನ್ನು ಕಡಿಮೆಗೊಳಿಸಲಿಲ್ಲ. ಯೇಸುವು ರೊಟ್ಟಿ ಮತ್ತು ದ್ರಾಕ್ಷಾರಸಗಳು ಆತನ ದೇಹ ಹಾಗೂ ರಕ್ತವನ್ನು ಸೂಚಿಸುತ್ತವೆಂದು ಹೇಳುವದಕ್ಕೆ ಮುನ್ನ ಇವುಗಳನ್ನು ಪ್ರಥಮ ಶತಮಾನದಲ್ಲಿ ಜನರು ಸಾಂಕೇತಿಕ ಅರ್ಥದಲ್ಲಿ ಬಳಸುತ್ತಿದ್ದರು (ಮತ್ತಾಯ 26:26-28). ಅದೇ ರೀತಿಯಲ್ಲಿ, ದೀಕ್ಷಾಸ್ನಾನವು ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಒಂದು ರೂಪವೆಂಬುದಾಗಿ ಪರಿಚಯಿಸಲ್ಪಡುವ ಮುನ್ನವೇ ಕೆಲವು ಧಾರ್ಮಿಕ ಗುಂಪುಗಳು ಸ್ನಾನಗಳನ್ನು ಆಚರಿಸುತ್ತಿದ್ದರು (ರೋಮಾ 6:1-6). ಕಾಲವು ಗತಿಸಿದ ಹಾಗೆ ಕ್ರೈಸ್ತರು ಹೇಗೆ ದೀಕ್ಷಾಸ್ನಾನ ಮತ್ತು ಕರ್ತನ ಭೋಜನಗಳು ಅರ್ಥವಿಲ್ಲದಂತಾಗುವ ಹಾಗೆ ಅವಕಾಶ ಕೊಟ್ಟರೋ, ಹಾಗೆಯೇ ಸುನ್ನತಿಯ ವಿಷಯದಲ್ಲಿಯೂ ನಡೆದಿತ್ತು. ದೇವರಾತ್ಮನಿಂದ ಹೃದಯದ ಆಂತರೀಕ ಸುನ್ನತಿಯಾಗುವ ಹೊರತು ಬಾಹ್ಯ ಸುನ್ನತಿಯು ಸಾಕಾಗುವಂಥದ್ದಲ್ಲ ಎಂಬುದಾಗಿ ಪೌಲನು ಒತ್ತಿ ಹೇಳಿದನು (ರೋಮಾ 2:28, 29).

ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ, ಪೌಲನು ದೀಕ್ಷಾಸ್ನಾನ ಮತ್ತು ಸುನ್ನತಿಗಳೆರಡನ್ನೂ ಒಟ್ಟಿಗೆ ಪ್ರಸ್ತಾಪಿಸಿದನು. ಕೊಲೊಸ್ಸೆಯಲ್ಲಿದ್ದ ಅನ್ಯಜನಾಂಗದ ಕ್ರೈಸ್ತರು ಶಾರೀರಿಕವಾಗಿ ಸುನ್ನತಿಯಿಲ್ಲದೆ ಇದ್ದರಾದರೂ, ಅವರು "ಕೈಯಿಂದ ಮಾಡಿದ್ದಲ್ಲದ" "ಕ್ರಿಸ್ತೀಯ ಸುನ್ನತಿ" ಯನ್ನು ಹೊಂದಿದವರಾಗಿದ್ದರು ಎಂಬುದಾಗಿ ಅಪೊಸ್ತಲನು ದೃಢಪಡಿಸುತ್ತಾನೆ (ಕೊಲೊಸ್ಸೆ 2:11). ಬಳಿಕ ಆತನು ವಿವರಿಸಿದ್ದೇನೆಂದರೆ ಒಬ್ಬ ವ್ಯಕ್ತಿಯು (ಕೈಯಿಂದ) "ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟು" ಬಳಿಕ "ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು" ಬಂದಾಗ ಆ "ಕ್ರಿಸ್ತೀಯ ಸುನ್ನತಿ" ಸಂಭವಿಸುತ್ತದೆ ಎಂಬುದೆ (ಕೊಲೊಸ್ಸೆ 2:12). ಅಂತಿಮವಾಗಿ, ಪೌಲನು ಈ ಸಹೋದರರಿಗೆ ಹೇಳಿದ್ದೇನೆಂದರೆ, ಇವರು "ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿ" ಇದ್ದಾಗ್ಯೂ ಅವರ ಮೇಲೆ ಒಂದು ಆತ್ಮೀಕ ಸುನ್ನತಿಯ ನಡಿಸಲ್ಪಟ್ಟಿತು, ಅವರ "ಅಪರಾಧಗಳನ್ನೆಲ್ಲಾ ಕ್ಷಮಿಸಿ" ಕ್ರಿಸ್ತನ ಜೊತೆಯಲ್ಲಿ "ಬದುಕಿಸಿದ್ದಾನೆ" ಎಂಬುದೆ (ಕೊಲೊಸ್ಸೆ 2:13). ಈ ಕೊಲೊಸ್ಸೆಯವರ ಮೇಲೆ ಆತ್ಮೀಕ ಸುನ್ನತಿಯನ್ನು ಮಾಡಿದವನು ದೇವರೇ ಆಗಿದ್ದನು, ಮತ್ತು ಆತನು ಶಸ್ತ್ರಚಿಕಿತ್ಸೆಯನ್ನು ಇಂದು ನಮಗೆ ಮಾಡುವವನಾಗಿದ್ದಾನೆ: ನಾವು ಆತನಿಗೆ ನಂಬಿಕೆಯಿಂದ ವಿಧೇಯರಾಗಿ, ನೀರಿನ ದೀಕ್ಷಾಸ್ನಾನದಲ್ಲಿ ಆತನೊಂದಿಗೆ ಹೂಣಲ್ಪಡುವಾಗ ಆತನು ನಮ್ಮ ಹೃದಯಗಳ ಪಾಪಗಳನ್ನು ಕ್ಷಮಿಸುತ್ತಾನೆ (ಕತ್ತರಿಸಿ ಬಿಡುವನು). ದೀಕ್ಷಾಸ್ನಾನದಲ್ಲಿ, ಯೇಸುವು ಶಾರೀರಿಕವಾಗಿ ಏನನ್ನು ಅನುಭವಿಸಿದನೋ ಅದನ್ನು ಪಶ್ಚಾತ್ತಾಪ ಪಟ್ಟಿರುವ ಪಾಪಿಯು ಸಾಂಕೇತಿಕವಾಗಿ ಅನುಭವಿಸುತ್ತಾನೆ. ಈ ಪಾಪದ ಪಾಲಿಗೆ ಮರಣಿಸುವುದು ನಡೆದ ಬಳಿಕ, ಹೊಸಬನಾಗಿ ನಡೆದುಕೊಳ್ಳುವಂತೆ ಒಬ್ಬ ನೂತನ ಕ್ರೈಸ್ತನು ಎಬ್ಬಿಸಲ್ಪಡುತ್ತಾನೆ (ರೋಮಾ 6:3-6).

*ದೇವರು ನಮ್ಮನ್ನು ಮುಂದಕ್ಕೆ ನಡಿಸುವನು* (17:15-22). ದೇವರು ಒಡಂಬಡಿಕೆಯ ನೆರವೇರಿಕೆಗೆ ಅಸಾಧ್ಯವೆಂದು ತೋರುವಂತಹ, ಹೊಸ ಸಾಧನವನ್ನು ಹೆಸರಿಸಿದನು. ಅಬ್ರಹಾಮನಿಗೆ ಒಬ್ಬ ಮಗನನ್ನು ಮತ್ತು ಅನೇಕ ಸಂತತಿಯವರನ್ನು ಕೊಡುವ ವಾಗ್ದಾನವು ಈಗ ಆತನ ಹೆಂಡತಿಯಾದ ಸಾರಳನ್ನು, ವಾಗ್ದಾನ ಮಾಡಲ್ಪಟ್ಟ ಮಗುವಿನ ತಾಯಿಯಾಗಿ ಅದರೊಳಗೆ ಸೇರಿಸಲ್ಪಡುವಂತೆ ಸಂಕುತಿಗೊಂಡಿತ್ತು. ಹಾಗರಳೊಂದಿಗೆ ನಡೆಸಿದ ಪ್ರಯೋಗದ ಮೂಲಕವಾಗಿ, ಬದಲಿ ತಾಯಿಯು ಸಾಕಾಗುವದಿಲ್ಲ ಎಂಬುದನ್ನು ಈ ದಂಪತಿಯು ಈಗಾಗಲೇ ಕಂಡುಕೊಂಡಿದ್ದರು. ಸಾರಳು ವಾಗ್ದಾನ ಮಾಡಲ್ಪಟ್ಟ ಮಗುವಿಗೆ ತಾಯಿಯಾಗುವುದು ಎಷ್ಟು ಪ್ರಾಮುಖ್ಯವಾಗಿತ್ತೋ ಅಬ್ರಹಾಮನು ಆತನಿಗೆ ತಂದೆಯಾಗುವುದು ಸಹ ಅಷ್ಟೇ ಪ್ರಾಮುಖ್ಯವಾಗಿತ್ತು.

ದೇವರು ಈ ಮುಂಚೆ ಬಂಜೆಯಾಗಿದ್ದ ಆತನ ಹೆಂಡತಿಯ ಮೂಲಕವಾಗಿ ಮೂಲಪಿತೃವಿಗೆ ಒಬ್ಬ ಮಗನನ್ನು ಅನುಗ್ರಹಿಸುವನು ಎಂಬುದಕ್ಕೆ ಒಂದು ಗುರುತಾಗಿ, ಯೆಹೋವನು ಆಕೆಯ ಹೆಸರನ್ನು "ಸಾರಯ" ಎಂಬುದರಿಂದ "ಸಾರಾ" ಎಂದು ಬದಲಾಯಿಸಿದನು (17:15). ಎರಡು ಹೆಸರುಗಳ ನಡುವಿನ ಭಿನ್ನತೆಯು ಏನೇ ಆಗಿದ್ದರೂ ಸರಿಯೇ, ಹೆಚ್ಚುಕಡಿಮೆ ತೊಂಭತ್ತು ವರ್ಷದವಳಾಗಿರುವ ಒಬ್ಬ ಸ್ತ್ರೀಯು ಒಬ್ಬ ಮಗನನ್ನು ಹಡೆಯುವಳು ಎಂಬುದು ಅಬ್ರಹಾಮನಿಗೆ ಹಾಸ್ಯಾಸ್ಪದವಾಗಿತ್ತು. ಆತನು ನೆಲದ ಮೇಲೆ ಬಿದ್ದು ಅಪನಂಬಿಕೆಯಿಂದ ನಕ್ಕನು, ಮತ್ತು ದೇವರಿಗೆ ಜನಾಂಗಗಳನ್ನು ಮತ್ತು ಅರಸರನ್ನು ಹುಟ್ಟಿಸುವಂಥ ಒಬ್ಬ ಮಗನು ಯಾರಾಗಿರಬೇಕೆಂಬುದಾಗಿ - ಹೆಸರಿಸುವದಾದರೆ, ಇಸ್ಮಾಯೇಲನನ್ನು ಆದುಕೊಳ್ಳಲ್ಪಟ್ಟ ಬಾಧ್ಯಸ್ತನು ಎಂದು ಗುರುತಿಸಬಹುದು - ಸಲಹೆಯನ್ನು

ಕೊಟ್ಟನು (17:16-18). ಈ ಹೊತ್ತಿಗಾಗಲೇ ಆ ಮಗುವು ಹದಿಮೂರು ವರ್ಷದವನಾಗಿದ್ದನು, ಮತ್ತು ದೇವರು ಏಕೆ ಆತನನ್ನು ವಾಗ್ದಾನದ ಮಗುವಾಗಿ ಅಂಗೀಕರಿಸಿಕೊಳ್ಳುವದಿಲ್ಲ ಎಂದು ಅಬ್ರಹಾಮನು ಚಕಿತಗೊಂಡನು. ಖಂಡಿತವಾಗಿಯೂ, ಅಬ್ರಹಾಮನು ಮಿತಿಮೀರಿದ ಭರವಸನ್ನು ಹೊಂದಿದ್ದನು. ಆತನು ತನಗೆ ಇನ್ನಷ್ಟು ಅಧಿಕ ನಂಬಿಕೆಯ ಅಗತ್ಯವಿದೆ ಎಂಬುದನ್ನು ತೋರ್ಪಡಿಸಿಕೊಳ್ಳುತ್ತಿದ್ದಾನೆ, ನಾವೆಲ್ಲರೂ ಸಹ ಅಂಥ ಪರಿಸ್ಥಿತಿಗಳಲ್ಲಿ ಹಾಗೆಯೇ ಮಾಡುತ್ತೇವಷ್ಟೆ. ಹೇಗೂ, ದೇವರಿಗೆ ಆತನ ಸಲಹೆಯ ಅಗತ್ಯವಿರಲಿಲ್ಲ, ಹಾಗೆಯೇ ಅತನಿಗೆ ನಮ್ಮ ಸಲಹೆಯ ಅಗತ್ಯವೂ ಇರುವದಿಲ್ಲ. ತಾನೇನು ಮಾಡುತ್ತಿದ್ದೇನೆಂಬುದು ಯೆಹೋವನಿಗೆ ಗೊತ್ತಿತ್ತು ಮತ್ತು ಎಲ್ಲವನ್ನೂ ತನ್ನ ನಿಯಂತ್ರಣದಲ್ಲಿ ಹೊಂದಿದ್ದನು; ಆದಾಗ್ಯೂ ಆತನು ಅಬ್ರಹಾಮನಲ್ಲಿದ್ದ ನಂಬಿಕೆಯ ಕೊರತೆಯ ವಿಷಯದಲ್ಲಿ ತಾಳ್ಮೆಯಿಂದಿದ್ದನು, ನಮ್ಮ ವಿಷಯದಲ್ಲಿಯೂ ಹಾಗೆಯೇ ಇದ್ದಾನೆ.

ಅಷ್ಟೊಂದು ವರ್ಷಗಳ ಕಾಲ ನೆರವೇರದೆ ಇರುವ ವಾಗ್ದಾನಗಳ ವಿಷಯದಲ್ಲಿ ಹೋರಾಟವನ್ನು ಅನುಭವಿಸಿದವನಾಗಿ, ಇದು ಜನಾಂಗಗಳ ಪಿತೃವು ಕಲಿಯಬೇಕಾಗಿದ್ದ ಒಂದು ಕಠಿಣ ಪಾಠವಾಗಿತ್ತು. ಬೈಬಲಿನಲ್ಲಿ ಅಬ್ರಹಾಮನು ನಂಬಿಕೆಯ ವೀರನೆಂದು ಪಟ್ಟಿ ಮಾಡಲ್ಪಟ್ಟಿದ್ದಾನೆ ಯಾಕೆಂದರೆ, ಸಾರಳ ಮೂಲಕವಾಗಿ ಮಗನೊಬ್ಬನನ್ನು ಅನುಗ್ರಹಿಸುವೆನೆಂಬ ದೇವರ ವಾಗ್ದಾನವು ನೆರವೇರುವದಕ್ಕೆ ಯಾವ ದಾರಿಯೂ ಇರುವದಿಲ್ಲ ಎಂಬುದನ್ನು ಕಂಡಾಗ್ಯೂ, ಆತನು ಆಗಲೂ ನಂಬಿಕೆಯನ್ನು ಹೊಂದಿದ್ದನು. ಮಾನವ ದೃಷ್ಟಿಕೋನವೊಂದರಿಂದ ನೋಡುವಾಗ, ದೇವರು ವಾಗ್ದಾನ ಮಾಡಿದ್ದ ಸಂಗತಿಯು ಅಸಾಧ್ಯವಾಗಿತ್ತು; ಆದರೆ ಅಬ್ರಹಾಮನು "ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ" ಇರುವ ದೇವರನ್ನು "ನಂಬಿದನು" ಎಂದು ಪೌಲನು ಹೇಳುತ್ತಾನೆ (ರೋಮಾ 4:17). ಅಪೊಸ್ತಲನು ಮುಂದುವರೆದು ಹೀಗೆ ಹೇಳಿದನು, "ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದು," ಮಾತ್ರವಲ್ಲದೆ "ಸಾರಳಿಗೆ ಗರ್ಭಕಾಲ ಕಳೆದುಹೋಯಿತೆಂದು" ಗೊತ್ತಿದ್ದಾಗ್ಯೂ ಆತನು "ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು" (ರೋಮಾ 4:18, 19).

"ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸುವುದು" ದೇವರ ಜನರಿಗೆ ಯಾವಾಗಲೂ ಒಂದು ಸವಾಲು ಆಗಿರುತ್ತದೆ. ಅನಂತರದಲ್ಲಿ, ಇಸ್ರಾಯೇಲ್ಯರು ಐಗುಪ್ತದೊಳಗೆ ಇರುವ ವೇಳೆ, ಅವರಿಗೆ ಅಬ್ರಹಾಮ, ಇಸಾಕ, ಮತ್ತು ಯಾಕೋಬರ ದೇವರ ಮಂದವಾದ ನೆನಪನ್ನು ಉಳಿಸಿಕೊಂಡಿದ್ದರು; ಹೇಗೂ, ಅವರು ವಿಗ್ರಹಾರಾಧನೆಗೆ ತಿರುಗಿಕೊಂಡಿದ್ದರು, ಐಗುಪ್ತದ ದೇವರುಗಳನ್ನು ಆರಾಧಿಸುತ್ತಿದ್ದರು (ಯೆಹೋಶುವ 24:14). ಅವರು ಮೃತ ಜನರಂತಿದ್ದರು, ಅವರು ಯಾವದೇ ಶಾರೀರಿಕ ಅಥವಾ ಆತ್ಮೀಕ ರಕ್ಷಣೆಯ ನಿರೀಕ್ಷೆಯಿಲ್ಲದೆ ಈ ಲೋಕದಲ್ಲಿ ನಡೆದಾಡುತ್ತಿದ್ದರು. ಅಂತಿಮವಾಗಿ, ದೇವರು ಮೋಶೆಯ ಮೂಲಕವಾಗಿ ಮಧ್ಯಪ್ರವೇಶಿಸಿದನು, ಐಗುಪ್ತರು ಆತನ ಜನರನ್ನು ದಾಸತ್ವದಿಂದ ಸ್ವತಂತ್ರರಾಗುವಂತೆ ಹೊರಡಲು ಅವಕಾಶ ಕೊಡುವಂತಾಗುವ ಹಾಗೆ ಅವರ ಮೇಲೆ ಹತ್ತು ಉಪದ್ರವಗಳನ್ನು ಬರಮಾಡಿದನು. ಐಗುಪ್ತವು ದೇಶದಲ್ಲೆಲ್ಲಾ ವಿಧ್ವಂಸವನ್ನುಂಟು ಮಾಡಿದ್ದ ಉಪದ್ರವಗಳಿಂದ ಘೋರವಾಗಿ ಬಾಧೆಯನ್ನನುಭವಿಸಿದ ಬಳಿಕ, ಅಂತಿಮವಾಗಿ ಫರೋಹನ ಗರ್ವದ ಭಂಗವಾಗಿತ್ತು. ಆತನು ಇಸ್ರಾಯೇಲ್ಯರನ್ನು ಹೊರಡುವಂತೆ ಅನುಮತಿಸುವದಕ್ಕೆ ನಿರ್ಧರಿಸಿದನು. ಅವರು ಐಗುಪ್ತದಿಂದ ಹೊರಗೆ ಸಾಗುತ್ತಿರುವ ವೇಳೆ, ಅರಸನು ತನ್ನ ಮನಸ್ಸನ್ನು

ಬದಲಾಯಿಸಿಕೊಂಡನು ಮತ್ತು ಅವರನ್ನು ಬೆನ್ನತ್ತುವಂತೆ ಸೈನ್ಯವನ್ನು ಕಳುಹಿಸಿದನು. ಇಬ್ರಿಯರು ಮುಂದೆ ಸಮುದ್ರ ಮತ್ತು ಅವರ ಹಿಂದೆ ಐಗುಪ್ತದ ಸೈನ್ಯದಿಂದಾಗಿ ಸುತ್ತವರೆಯಲ್ಪಟ್ಟವರಾಗಿದ್ದರು; ಮಾನವ ದೃಷ್ಟಿಕೋನದಿಂದ ನೋಡುವದಾದರೆ ಅವರಿಗೆ ವಿಮೋಚನೆ ಸಿಕ್ಕುವುದು ಅಸಾಧ್ಯವೆಂಬಂತೆ ಕಂಡಿತ್ತು.

ಆ ಸಂದರ್ಭದಲ್ಲಿ, ದೇವರು ಅದ್ಭುತಕರವಾಗಿ ಮಧ್ಯಪ್ರವೇಶ ಮಾಡಿದನು. ಇಸ್ರಾಯೇಲ್ಯರಿಗೆ ಮರಣದಂಡನೆ ಎಂಬಂತೆ ಅನ್ನಿಸಿರಬಹುದಾದಂಥ ಒಂದು ನಡುಕಹುಟ್ಟಿಸುವ ಆಜ್ಞೆಯನ್ನು ಆತನು ಮೋಶೆಗೆ ನೀಡಿದ್ದನು: "ಮುಂದಕ್ಕೆ [ಸಮುದ್ರದೊಳಗೆ] ಹೊರಡು" (ವಿಮೋಚನಕಾಂಡ 14:15). ಮೋಶೆಯು ತನ್ನ ಕೋಲನ್ನು ಮೇಲಕ್ಕೆ ಎತ್ತಿದಾಗ ಮತ್ತು "ಸಮುದ್ರದ ಮೇಲೆ ಕೈಚಾಚಿ" ದಾಗ, ಸಮುದ್ರದ ನೀರು ಇಬ್ಭಾಗವಾಯಿತು, ಮತ್ತು ಎರಡು ಕಡೆಗಳಲ್ಲಿ ಗೋಡೆಗಳಂತೆ ನಿಂತುಕೊಂಡವು (ವಿಮೋಚನಕಾಂಡ 14:16, 21, 22). ಆ ಬಳಿಕ ಅವರ ಮುಂದುಗಡೆ, ಅವರ ಮೇಲೆ, ಮತ್ತು ಅವರ ಹಿಂದುಗಡೆಯಲ್ಲಿ ಒಂದು ಮೇಘವು ಇತ್ತು; ಮತ್ತು ಈ ಮೇಘವು ರಾತ್ರಿಯ ವೇಳೆ ಮೇಘಸ್ತಂಭವಾಗಿ ಮಾರ್ಪಟ್ಟು, ಅವರ ಹಾಗೂ ಅವರನ್ನು ಬೆನ್ನತ್ತಿದ್ದ ಐಗುಪ್ತದ ಸೈನ್ಯಗಳ ನಡುವೆ ಇತ್ತು (ವಿಮೋಚನಕಾಂಡ 14:19-24). ಇದೆಲ್ಲವೂ ಮಾನವ ದೃಷ್ಟಿಕೋನದಿಂದ ನೋಡಿದರೆ ಅಸಾಧ್ಯವಾಗಿತ್ತು! ಇಸ್ರಾಯೇಲ್ಯರು ಆ "ಮರಣಕರವಾದ ಕಣಿ" ಯಲ್ಲಿ ಹೋದ ಹಾಗೆ (ಕೀರ್ತನೆ 23:4), ಅವರು ಮೋಶೆಯ ನಾಯಕತ್ವವನ್ನು ಬಳಸಿಕೊಂಡು, ದೇವರು ಹೇಗೋ ಅವರನ್ನು ಅದರಿಂದ ಪಾರು ಮಾಡಿ ಕರೆದುಕೊಂಡು ಬರುವನು ಎಂಬುದಾಗಿ ನಂಬಬೇಕಾಗಿತ್ತು. ಅವರಿಗೆ ಮರಣಕರ ಸಮಾಧಿಯಾಗಿ ಕಂಡಂಥದ್ದು ವಾಸ್ತವಿಕದಲ್ಲಿ ಅವರಿಗೆ ಆಚೆ ದಡವನ್ನು ದಾಟಿಸುವ ಒಂದು ಹೊಸ ಜೀವಿತದ ದಾರಿಯಾಗಿ ಮಾರ್ಪಟ್ಟಿತ್ತು. ಪೌಲನು ಈ ಅನುಭವವನ್ನು 1 ಕೊರಿಂಥ 10:1, 2 ವಚನಗಳಲ್ಲಿ ದೀಕ್ಷಾಸ್ನಾನಕ್ಕೆ ಸಂಬಂಧಗೊಳಿಸುತ್ತಾನೆ. ಅಸಾಧ್ಯವಾಗಿದ್ದ ವಿಮೋಚನೆಯೊಂದು ದೇವರ ಶಕ್ತಿಯಿಂದಾಗಿ ಒಂದು ವಾಸ್ತವಿಕತೆಯಾಗಿ ಮಾರ್ಪಟ್ಟಿತ್ತು. ಇಬ್ರಿಯರಿಗೆ ಪತ್ರಿಕೆಯ ಲೇಖಕನು "ನಂಬಿಕೆಯಿಂದಲೇ ಇಸ್ರಾಯೇಲ್ಯರು ಕೆಂಪುಸಮುದ್ರವನ್ನು ... ದಾಟಿದರು" ಎಂದು ಹೇಳುತ್ತಾನೆ (ಇಬ್ರಿಯ 11:29); ಆದರೆ ಅವರು ತಮ್ಮ ಪಕ್ಷದಲ್ಲಿ ದೇವರ ರಕ್ಷಣೆಯ ಇರುವಿಕೆಯನ್ನು ಅನುಭವಿಸಬೇಕಾದರೆ ಅವರು ತಮ್ಮ ಕಾಲುಗಳು ರಾತ್ರಿಯಲ್ಲಿ ನಡೆಯುವಂತೆ ಮಾಡಿದ್ದು ವಿಧೇಯತೆಯುಳ್ಳ ನಂಬಿಕೆಯೇ ಆಗಿತ್ತು (ವಿಮೋಚನಕಾಂಡ 14:20, 22, 24).

*ನಾವು ಸಂದಿಗ್ಧ ಮನಸ್ಕರಾಗಿರಬಾರದೆಂದು ದೇವರು ಅಪೇಕ್ಷಿಸುತ್ತಾನೆ* (17:23-27). ಅಬ್ರಹಾಮನು ದೇವರ ಒಡಂಬಡಿಕೆಯ ಆಜ್ಞೆಗೆ ತಕ್ಷಣವೇ ವಿಧೇಯನಾದನು. ದೇವರು ಒಡಂಬಡಿಕೆಯನ್ನು ನವೀಕರಿಸಿದಾಗ, ಆತನಿಗಾಗಿ ಮತ್ತು ಸಾರಳಿಗಾಗಿ ಆತನು ಆರಿಸಿಕೊಂಡಿದ್ದ ಹೊಸ ಹೆಸರುಗಳನ್ನು ಪ್ರಕಟಗೊಳಿಸಿದಾಗ, ಮತ್ತು ವಾಗ್ದಾನದ ಮಗುವಿನ ಹೆಸರು ಏನೆಂಬುದನ್ನು (ಇಸಾಕ) ತಿಳಿಸಿದಾಗ, ಅಬ್ರಹಾಮನು ಉಜ್ಜೀವನವನ್ನು ಅನುಭವ ಮಾಡಿದನು. ಇಸ್ಮಾಯೇಲನು ಆತನಿಗೆ ಬಾಧ್ಯಸ್ಥನಾಗದೆ ಇರುತ್ತಿದ್ದಾಗ್ಯೂ, ಆತನ ಮೇಲೆ ದೇವರು ಸಮೃದ್ಧವಾದ ಆಶೀರ್ವಾದಗಳಿರುವವು ಮತ್ತು ಆತನನ್ನು ಹನ್ನೆರಡು ಅರಸರಿಗೆ ಮೂಲಪಿತೃ ಹಾಗೂ ಒಂದು ದೊಡ್ಡ ಜನಾಂಗಕ್ಕೆ ಜನಕನಾಗುವಂತೆ ಶಕ್ತಗೊಳಿಸುವುದು ಎಂಬುದನ್ನು ತಿಳಿದಾಗ ಪ್ರೋತ್ಸಾಹಗೊಂಡನು (17:20). ಒಡಂಬಡಿಕೆಯ ಗುರುತಿನ ವಿಷಯದಲ್ಲಿ ದೇವರ ಆಜ್ಞೆಯಂತೆ ನಡೆಯುವದಕ್ಕೆ ವಿಶ್ವಾಸಿಗಳ ತಂದೆಯು ಸಂದಿಗ್ಧ ಮನಸ್ಕನಾಗಲಿಲ್ಲ. ಆದಿಕಾಂಡ ಪುಸ್ತಕದ ಲೇಖಕನ ಪ್ರಕಾರ, ಅಬ್ರಹಾಮನು ಅದೇ ದಿನದಂದು

ಸುನ್ನತಿಯನ್ನು ಮಾಡಿಸಿಕೊಂಡನು. ಅಷ್ಟುಮಾತ್ರವಲ್ಲದೆ, ಆತನು ತನ್ನ ಮಗನಾದ ಇಸ್ಮಾಯೇಲ ಮತ್ತು ಆತನ ಪುರುಷ ಸೇವಕರೆಲ್ಲರಿಗೆ ಅದೇ ದಿನದಲ್ಲಿ ತಮ್ಮ ಮುಂದೋಗಲಿಗೆ ಸುನ್ನತಿ ಮಾಡಿಸಿಕೊಳ್ಳುವಂತೆ ಮಾಡಿದನು (17:23-27).

ಅಬ್ರಹಾಮನು ತಡಮಾಡದೆ ವಿಧೇಯನಾದ ರೀತಿಯ ಪ್ರತಿಕ್ರಿಯೆಯನ್ನು ದೇವರು ಯಾವಾಗಲೂ ಬಯಸುವವನಾಗಿದ್ದಾನೆ. ಅದು ತನ್ನ ಜನರನ್ನು ಪ್ರೀತಿಸುವಂತ ಯೆಹೋವನಿಗೆ ತೋರಿಸುವ ನಂಬಿಕೆ ಹಾಗೂ ಶ್ಲಾಘನೆಯ ಸೂಚನೆಯಾಗಿರುತ್ತದೆ. ದೇವರು ನಮ್ಮ ಹಿತಾಸಕ್ತಿಯ ಬಗ್ಗೆ ಚಿಂತಿಸುತ್ತಾನೆ ಮತ್ತು ಆತನ ಆಶೀರ್ವಾದಗಳನ್ನು ಅನುಭವಿಸುವ ರೀತಿಯಲ್ಲಿ ನಾವು ಹೋಗತಕ್ಕ ಮಾರ್ಗದಲ್ಲಿ ನಮ್ಮ ಜೀವಿತಗಳನ್ನು ಮಾರ್ಗದರ್ಶಿಸುತ್ತಾನೆ. ಒಬ್ಬ ಪ್ರೀತಿಸುವ ತಂದೆಯಾಗಿ, ನಾವು ಅವಿಧೇಯತೆಯ ಪರಿಣಾಮಗಳನ್ನು ಅನಭವಿಸಕೂಡದು ಎಂಬುದಕ್ಕಾಗಿ ಆತನು ಯಾವಾಗಲೂ ಇದನ್ನು ನಮ್ಮ ಹಿತಕ್ಕಾಗಿಯೇ ಮಾಡುತ್ತಾನೆ.

ಕಾನಾನ್ ದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಕುರಿತಾದ ಯೆಹೋವನ ವಾಗ್ದಾನಕ್ಕೆ ವಿಧೇಯರಾಗಲು ಇಸ್ರಾಲಯೇಲ್ಯರು ತಿರಸ್ಕರಿಸಿದ್ದು ಸಂದಿಗ್ಧಮನಸ್ಕರಾಗಿರುವದರ ಅಪಾಯಕ್ಕೆ ಒಂದು ದೃಷ್ಟಾಂತವಾಗಿದೆ. ಅವರು ಮೋಶೆ, ಆರೋನ, ಕಾಲೇಬ ಮತ್ತು ಯೆಹೋಶುವರ ವಿರುದ್ಧವಾಗಿ ಗುಣಗುಟ್ಟಿದರು ಮತ್ತು ಅವರು ಇನ್ನು ಸ್ವಲ್ಪದರಲ್ಲಿ ಅವರಿಗೆ ಕಲ್ಲೆಸೆಯುವದಕ್ಕಿದ್ದರು; ಆದರೆ ಅವರು ಅವಿಧೇಯತೆಯ ಪರಮಾವಧಿಯು ದೇವರ ವಿರುದ್ಧವಾಗಿತ್ತು. ಅವರು ದೇವರ ಮೇಲೆ ಆತನು ದುರುದ್ದೇಶಗಳನ್ನು ಹೊಂದಿದವನಾಗಿ ಕತ್ತಿಯಿಂದ ಸಾಯುವಂತಾಗುವ ಹಾಗೆ ತಮ್ಮನ್ನು ಅರಣ್ಯದೊಳಕ್ಕೆ ಕರೆದುಕೊಂಡು ಬಂದಿದ್ದಾನೆಂಬ ಆರೋಪವನ್ನು ಹೊರಿಸಿದರು (ಅರಣ್ಯಕಾಂಡ 14:1-10). ಮೋಶೆಯು ಜನರಿಗೋಸ್ಕರ ವಿಜ್ಞಾಪನೆಯನ್ನು ಮಾಡಿದನು, ಅವರ ಅನಂಬಿಕೆಯೊಳಗಿಂದ ಚಿಗುರಿ ಬಂದಂಥ ಅವರ ಅವಿಧೇಯತೆಯ ಪಾಪಕ್ಕಾಗಿ ಅವರನ್ನು ಕ್ಷಮಿಸಿಬೇಕೆಂದು ಕೇಳಿಕೊಂಡನು. ದೇವರು ಜನಾಂಗವನ್ನು ಕ್ಷಮಿಸಿದ್ದಂತೂ ನಿಜ; ಹೇಗೂ, ಈ ಪಾಪಕ್ಕಾಗಿ ದೊರೆತ ತಾತ್ಕಾಲಿಕ ದಂಡನೆಯು ಏನೆಂದರೆ ಅವಿಧೇಯರ ಮೊದಲ ತಲೆಮಾರು ಸಾಯವ ತನಕ ಅವರೆಲ್ಲಾ ನಾಲ್ವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಅಲೆದಾಡುತ್ತಲಿರುವದೇ ಆಗಿತ್ತು. ಮಹಾ ದುರಂತವು ಏನಾಗಿತ್ತೆಂದರೆ ಇಸ್ರಾಯೇಲ್ಯರಿಗೆ ಐಗುಪ್ತದಿಂದ ಹೊರಗೆ ಬರುವಷ್ಟು ನಂಬಿಕೆಯಿತ್ತು, ಆದರೆ ದೇವರಿಗೆ ವಿಧೇಯರಾಗಿ ವಾಗ್ದಾನದ ದೇಶದೊಳಗೆ ಪ್ರವೇಶಿಸುವದಕ್ಕೆ ಸಾಕಾಗುವಷ್ಟು ನಂಬಿಕೆಯು ಅವರಲ್ಲಿ ಇರಲಿಲ್ಲ (ಅರಣ್ಯಕಾಂಡ 14:19-35). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಈ ಕಥೆಯನ್ನು ಒಂದು ಎಚ್ಚರಿಕೆಯಾಗಿ ಬಳಸಿಕೊಂಡು ಇಸ್ರಾಯೇಲ್ಯರ ಹಾಗೆ ದೇವರನ್ನು ಬಿಟ್ಟು ಹೋಗುವ ಅಪನಂಬಿಕೆಯುಳ್ಳ ಹೃದಯವು ನಿಮ್ಮಲ್ಲಿ ಇರಬಾರದೆಂದು ಕ್ರೈಸ್ತರಿಗೆ ಹೇಳಿದನು (ಇಬ್ರಿಯ 3:7-12). ಅವರ "ಶವಗಳು ಅರಣ್ಯದಲ್ಲಿ ಬಿದ್ದು ಹೋದಂತೆ" ತನ್ನ ಜನರಾದ ಅವರ ಮೇಲೆ ನಾಲ್ವತ್ತು ವರ್ಷಗಳ ಕಾಲ ದೇವರಿಗೆ ಕೋಪವಿದ್ದದಕ್ಕೆ ಕಾರಣವು ಅವರನ್ನು ಅವಿಧೇಯತೆಗೆ ನಡಿಸಿದ ಅವರ ಅಪನಂಬಿಕೆಯೇ ಆಗಿತ್ತು (ಇಬ್ರಿಯ 3:17-19).

ಸುವಾರ್ತೆಗೆ (ಶುಭವರ್ತಮಾನ) ತ್ವರಿತವಾಗಿ ವಿಧೇಯರಾಗುವುದು ಪ್ರಾಮುಖ್ಯವಾದದ್ದು; ಇನ್ನಷ್ಟು ಹೆಚ್ಚು ಅನುಕೂಲವಾದ ಸಮಯ ಸಿಕ್ಕುವ ವರೆಗೂ ನೋಡೋಣ ಎಂದು ಅದನ್ನು ಮುಂದೂಡಕೂಡದು. ರಕ್ಷಣೆಯುಂಟು ಮಾಡುವ ನಂಬಿಕೆಯು ಯಾವಾಗಲೂ ವಿಧೇಯತೆಯುಳ್ಳ ನಂಬಿಕೆಯಾಗಿರುತ್ತದೆ (ಯೋಹಾನ 3:36; ಇಬ್ರಿಯ 5:8, 9). ಹೊಸ ಒಡಂಬಡಿಕೆಯಲ್ಲಿ, ಜನರಲ್ಲಿ ಪಾಪದ ಅರುಹು ಹುಟ್ಟಿಸಲ್ಪಟ್ಟು ಯೇಸು ಕ್ರಿಸ್ತನನ್ನು ತಮ್ಮ

ರಕ್ಷಕನನ್ನಾಗಿಯೂ ಕರ್ತನನ್ನಾಗಿಯೂ ಅಂಗೀಕರಿಸಿಕೊಂಡಾಗ, ಅವರು ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಸಂದಿಗ್ಧ ಮನಸ್ಕರಾಗಿರಲಿಲ್ಲ. ಪಂಚಾಶತ್ತಮ ದಿನದಂದು, ಮೂರು ಸಾವಿರ ಜನರು ಸುವಾರ್ತೆಯು ಸಾರಲ್ಪಡುವದನ್ನು ಕೇಳಿದ ಮೊದಲ ಸಾರಿಗೆ ಅದೇ ದಿನದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:37-41). ಅಪೊಸ್ತಲರ ಕೃತ್ಯಗಳು ಪುಸ್ತಕದುದ್ದಕ್ಕೂ ಇದೇ ಆದರ್ಶವನ್ನು ಅನುಸರಿಸಲಾಗಿರುತ್ತದೆ, ಇದು ಅನೇಕ ಉದಾಹರಣೆಗಳಿಂದ ತೋರ್ಪಡಿಸಲ್ಪಟ್ಟಿದೆ. ಸಮಾರ್ಯರ ವಿಷಯದಲ್ಲಿ ತಕ್ಷಣವೇ ವಿಧೇಯರಾದರೆಂಬುದು ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 8:12, 13), ಮತ್ತು ಐತಿಯೋಪ್ಯದ ಕಂಚುಕಿಯೊಂದಿಗೆ ನಡೆದ ಸಂಭಾಷಣೆಯಲ್ಲಿ ಇದು ಹೇಳಲ್ಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 8:35-39), ತಾರ್ಸದ ಸೌಲ (ಅಪೊಸ್ತಲರ ಕೃತ್ಯಗಳು 9:17, 18; 22:12-16), ಕೊರ್ನೇಲ್ಯ ಮತ್ತು ಆತನ ಮನೆಯವರು (ಅಪೊಸ್ತಲರ ಕೃತ್ಯಗಳು 10:30-48), ಲುದ್ಯಳು ಮತ್ತು ಆಕೆಯ ಮನೆಯವರು (ಅಪೊಸ್ತಲರ ಕೃತ್ಯಗಳು 16:13-15), ಫಿಲಿಪ್ಪಿಯದ ಸೆರೆಮನೆಯ ಅಧಿಕಾರಿ ಹಾಗೂ ಆತನ ಮನೆಯವರು (ಅಪೊಸ್ತಲರ ಕೃತ್ಯಗಳು 16:25-34), ಮತ್ತು ಕ್ರಿಸ್ಪನು ಮತ್ತು ಆತನ ಮನೆಯವರು (ಅಪೊಸ್ತಲರ ಕೃತ್ಯಗಳು 18:8) ಇವರ ವಿಷಯಗಳಲ್ಲಿ ಅದು ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿದೆ. ಜನರು ಸುವಾರ್ತೆಯ ಆಮಂತ್ರಣಕ್ಕೆ ತಾವು ಪ್ರತಿಕ್ರಿಯಿಸುವದನ್ನು ಮುಂದೂಡುವ ಮೂಲಕ ನಮಗೆ ಆಗಲೂ ದೇವರ ಕೃಪೆ ಸಿಕ್ಕುತ್ತದೆಂದು ಎಂದಿಗೂ ಭಾವಿಸಿಕೊಳ್ಳಕೂಡದು. ಪೌಲನು ಕೊರಿಂಥದವರಿಗೆ ಹೇಳಿದ ಹಾಗೆ, "ಈಗಲೇ ಆ ಸುಪ್ರಸನ್ನತೆಯಕಾಲ; ಇದೇ ಆ ರಕ್ಷಣೆಯ ದಿನ" (2 ಕೊರಿಂಥ 6:2).

---

## ಅಡಿಟಿಪ್ಪಣಿಗಳು

[1]ಈ ಇಬ್ರಿಯ ಹೆಸರು "ಎಲ್ ಶಡ್ಡಾಯ್" ಎಂದು ಕೆಲವು ಆಂಗ್ಲ ಆವೃತ್ತಿಗಳಲ್ಲಿ ಲಿಪ್ಯಂತರಣ ಮಾಡಲಾಗಿರುತ್ತದೆ (NJPSV; NJB). [2]ಬೈಬಲಿ ಸಂದೇಹವಾದಿಗಳು ಆದಿಕಾಂಡ ಪುಸ್ತಕದಲ್ಲಿ ಮೂಲಪಿತೃಗಳು "ಯೆಹೋವ" ಎಂಬ ಹೆಸರನ್ನು ಬಳಸುವಿಕೆ (12:8; 13:4; 14:22; 21:33; 22:14; 26:22, 25; 27:7; 28:16, 21) ಮತ್ತು ವಿಮೋಚನಕಾಂಡ 6:3ರಲ್ಲಿ ದೇವರ ಹೇಳಿಕೆ ನಡುವೆ ಹೊಂದಾಣಿಕೆಯಿಲ್ಲದಿರುವಿಕೆಯನ್ನು ಕಾಣುತ್ತಾರೆ: "ನಾನು ಯೆಹೋವನು; ಅಬ್ರಹಾಮ ಇಸಾಕ ಯಾಕೋಬರಿಗೆ ನಾನು ಸರ್ವಶಕ್ತನಾದ ದೇವರೆಂಬ ಹೆಸರುಳ್ಳವನಾಗಿ ಕಾಣಿಸಿಕೊಂಡೆನೇ ಹೊರತು ಯೆಹೋವನು ಎಂಬ ನನ್ನ ಹೆಸರಿನಿಂದ ಅವರಿಗೆ ಗೋಚರವಾಗಲಿಲ್ಲ." ಅನಂತರದ ವಾಕ್ಯಭಾಗದಲ್ಲಿ, "ಯೆಹೋವ" ಎಂಬ ಹೆಸರು ಆತನ ಜನರಿಗೆ ಪರಿಚಯವಿಲ್ಲದ್ದಾಗಿತ್ತು ಎಂದು ಹೇಳುತ್ತಿಲ್ಲ. ಬದಲಾಗಿ, ದೇವರು ಐಗುಪ್ತದಲ್ಲಿ, ಉಪದ್ರವಗಳನ್ನು ಬರಮಾಡುವುದು ಮತ್ತು ಕೆಂಪು ಸಮುದ್ರವನ್ನು ಇಬ್ಭಾಗಿಸುವಂಥ ಮಹತ್ಕಾರ್ಯಗಳನ್ನು ನಡಿಸುವ ಮೂಲಕ ತನ್ನ ಸ್ಮರಣಾರ್ಥ ಹೆಸರಿನ ಇನ್ನು ಅತ್ಯಧಿಕವಾದ ಮಹತ್ವವನ್ನು ಪ್ರಕಟಗೊಳಿಸುವನು ಎಂದು ಸನ್ನಿವೇಶವು ಸೂಚಿಸುತ್ತದೆ (ವಿಮೋಚನಕಾಂಡ 3:14, 15). "ಯೆಹೋವ" (יהוה, *ಯಾಹು*) ಎಂಬ ಹೆಸರು ಇಬ್ರಿಯ ಭಾಷೆಯ ಕ್ರಿಯಾಪದಕ್ಕೆ (הָיָה, *ಹಾಯಾಹ*) ಸಂಬಂಧಿಸಿದ್ದಾಗಿದೆ. ಆತನು "ಸಂಗತಿಗಳನ್ನು ಅಸ್ತಿತ್ವಕ್ಕೆ ಬರುವಂತೆ, ಸಂಭವಿಸುವಂತೆ, ನಡೆಯುವಂತೆ ಮಾಡುವ ದೇವರು" ಆಗಿದ್ದಾನೆ. [3]Victor P. Hamilton, "שַׁדַּי," in *TWOT*, 2:907; ನೋಡಿ Talmud *Hagigah* 12a. [4]Jon D. Levenson, "Genesis," in *The Jewish Study Bible*, ed. Adele Berlin and Marc Zvi Brettler (New York: Oxford University Press, 2004), 37. [5]J. Barton Payne, "תָּמִים," in *TWOT*, 2:973–74. [6]ಈ ಉಲ್ಲೇಖಗಳು ಅಬ್ರಹಾಮ, ಇಸಾಕ, ಮತ್ತು ಯಾಕೋಬರ ಆದುಕೊಂಡ ವಂಶದಲ್ಲಿ ಹುಟ್ಟಿದ ಸಂತತಿಯವರಾದ ಇಸ್ರಾಯೇಲ್ ಜನಾಂಗದ ಕಡೆಗೆ ಬೆರಳು ಮಾಡುತ್ತವೆ. [7]J. Barton Payne, "אַבְרָהָם," in *TWOT*, 1:6. [8]ಯೋನನು "ಮೂರು ದಿನ ಹಗಲಿರುಳು" ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನಾದರೂ, ಆತನು ಕಾವ್ಯಾತ್ಮಕವಾಗಿ ಹೇಳಿದ್ದೇನೆಂದರೆ "ಭೂಲೋಕದ ಅಗುಳಿಗಳು *ಎಂದಿಗೂ* ತೆಗೆಯದ ಹಾಗೆ ನನ್ನ ಹಿಂದೆ ಹಾಕಲ್ಪಟ್ಟವು" ಎಂಬುದೆ (ಯೋನ 1:17; 2:6; ಒತ್ತಿ ಹೇಳಿದ್ದು ನನ್ನದು). [9]ತನಗೆ ಒಬ್ಬ ಮಗನನ್ನು (ಸಮುವೇಲ) ಅನುಗ್ರಹಿಸುವದಾದರೆ, ಆತನನ್ನು "ಜೀವದಿಂದಿರುವ ತನಕ" - *"ಶಾಶ್ವತವಾಗಿ"* ಉಳಿಯುವದು ಎಂಬಂತೆ ಅನುವಾದಿಸಲ್ಪಟ್ಟಿರುವ ಒಂದು ಮಾತು - ಯೆಹೋವನ ಸೇವೆಗೆ ಸಮರ್ಪಿಸುವೆನು ಎಂಬುದಾಗಿ ಹನ್ನಳು ಹರಕೆ ಮಾಡಿಕೊಂಡಳು (1 ಸಮುವೇಲ 1:11, 22; ಒತ್ತಿ ಹೇಳಿದ್ದು ನನ್ನದು). [10]Jack M. Sasson,

“Circumcision in the Ancient Near East,” *Journal of Biblical Literature* 85, no. 4 (December 1966): 475–76.

[11]John A. Wilson, trans., “Circumcision in Egypt,” in *Ancient Near Eastern Texts Relating to the Old Testament*, 3d ed., ed. James B. Pritchard (Princeton, N.J.: Princeton University Press, 1969), 326. [12]Robert G. Hall, “Circumcision,” in *The Anchor Bible Dictionary*, ed. David Noel Freedman (New York: Doubleday, 1992), 1:1025–26. [13]NIVಯಲ್ಲಿ “ಹೌದು, ಆದರೆ” ಎಂದಿರುತ್ತದೆ, ಅದು ಸಾಧ್ಯವಿರುತ್ತದಾದರೂ, ಈ ಸನ್ನಿವೇಶದಲ್ಲಿ ಅದು ಸಹಾಯವಾಗುವದಕ್ಕಿಂತ ಅಧಿಕವಾಗಿ ಗೊಂದಲವುಂಟು ಮಾಡುವದಾಗಿ ಕಾಣಿಸುತ್ತದೆ. [14]William Shakespeare *Romeo and Juliet* 2.2.43–44.